# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA






ಸಂಪುಟ:02 • ಸಂಚಿಕೆ:07 • ನೋಂದಣಿ ನಂ.:KARKAN27911 • ವಿಜಯನಗರ • 28.06.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue:07 • Reg.No:KARKAN27911 • VIJAYANAGARA • 28.06.2024 • Friday • Page:04 • Rs:2





ಮೈಕ್ರೋ ನ್ಯೂಸ್

## ಹೂವಿನಹಡಗಲಿ: ವಸ್ತು ಸಂಗ್ರಹಾಲಯ ವೀಕ್ಷಣೆಗೆ ಪ್ರವೇಶ ನಿರ್ಬಂಧ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೂವಿನ ಹಡಗಲಿಯಲ್ಲಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸರ್ಕಾರಿ ವಸ್ತು ಸಂಗ್ರಹಾಲಯದ ಕಟ್ಟಡದ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಸಾರ್ವಜನಿಕರ ಹಿತದೃಷ್ಠಿಯಿಂದ ಈ ವಸ್ತು ಸಂಗ್ರಹಾಲಯವನ್ನು ಸಾರ್ವಜನಿಕರ /ಪ್ರವಾಸಿಗರ ವೀಕ್ಷಣೆಗಾಗಿ ಪ್ರವೇಶ ನಿರ್ಬಂಧಿಸಲು ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಆದೇಶಿಸಿದ್ದಾರೆ.

ಜೂನ್ 28ರಿಂದ ಜಾರಿಗೆ ಬರುವಂತೆ ಹೂವಿನಹಡಗಲಿಯಲ್ಲಿನ ಸರ್ಕಾರಿ ವಸ್ತು ಸಂಗ್ರಹಾಲಯವನ್ನು ಸಾರ್ವಜನಿಕರ ಪ್ರವಾಸಿಗರ ವೀಕ್ಷಣೆಗಾಗಿ ಪ್ರವೇಶವನ್ನು ಮುಂದಿನ ಆದೇಶದವರೆಗೆ ನಿರ್ಬಂಧಿಸಲಾಗಿದೆ ಎಂದು ಸರ್ಕಾರಿ ವಸ್ತು ಸಂಗ್ರಹಾಲಯದ ಮೇಲ್ವಿಚಾರಕರಾದ ಡಾ.ಆರ್. ಮಂಜನಾಯ್ಕ ತಿಳಿಸಿದ್ದಾರೆ.

## ಪರೀಕ್ಷಾ ಕೇಂದ್ರಗಳ ಸುತ್ತಲು ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಜೂನ್ 30ರಂದು ಜಿಲ್ಲೆಯಲ್ಲಿ ನಡೆಯಲಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ-2024ರ 15 ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ. ಈ ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚ ಲು ಆದೇಶಿಸಲಾಗಿದೆ. ಈ ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಪರೀಕ್ಷಾರ್ಥಿ ಗಳಲ್ಲದ/ಪರೀಕ್ಷಾ ಉಸ್ತುವಾರಿ ಇಲ್ಲದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಅಥವಾ ಯಾವುದೇ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿ ಗುಂಪುಗಳಿಗೆ ಪ್ರವೇಶವನ್ನು ಕಡ್ಡಾಯ ನಿಷೇಧಿಸಿದೆ. ಈ ಆದೇಶವನ್ನು ಉಲ್ಲಂಘಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ತಿಳಿಸಿದ್ದಾರೆ.

# ಕೆಂಪೇಗೌಡ ವಿಜಯನಗರ ಸಾಮ್ರಾಜ್ಯದ ಸಾಮಂತ

### ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಡಾ.ಹೆಚ್.ಎಂ.ಚಂದ್ರಶೇಖರ ಶಾಸ್ತ್ರಿ ಹೇಳಿಕೆ | ಕೆರೆ ಕಟ್ಟೆ ನಿರ್ಮಿಸಿ ನೀರಿನ ಮಹತ್ವ ಸಾರಿದರು

### ಪ್ರಬಂಧ, ಭಾಷಣ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ | ಶ್ರೀ ಕೆಂಪೇಗೌಡರ ಆಡಳಿತ ಮಾದರಿ ಎಂದ ಜಿಲ್ಲಾಧಿಕಾರಿ ದಿವಾಕರ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಸಾಮ್ರಾಜ್ಯದ ಆಡಳಿತದಿಂದ ಪ್ರಭಾವಿತರಾಗಿದ್ದ ಶ್ರೀ ನಾಡ ಪ್ರಭು ಕೆಂಪೇಗೌಡರ ಆಡಳಿತವು ಇಂದಿಗೂ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಹೊಸಪೇಟೆ ಇವರ ಸಂಯುಕ್ತಾಶ್ರಯದಲ್ಲಿ ಜೂನ್ 27ರಂದು ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.



ಶ್ರೀ ಕೆಂಪೇಗೌಡ ಅವರು ಅಂದಿನ ಕಾಲದಲ್ಲಿಯೇ ನೀರಿನ ಹಾಗೂ ಮಣ್ಣಿನ ಮಹತ್ವ ತಿಳಿದಿದ್ದರು. ವೈಜ್ಞಾನಿಕವಾಗಿ ಅನೇಕ ಕೆರೆ-ಕಟ್ಟೆಗಳನ್ನು ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಕೊಡುಗೆ ನಮ್ಮ ನಾಡಿಗೆ ಅಪಾರವಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ. ಅವರು ಮಾತನಾಡಿ, ನಾಡಪ್ರಭು ಶ್ರೀ ಕೆಂಪೇಗೌಡರು ಬೆಂಗಳೂರಿನ ನಿರ್ಮಾತೃ ಎನಿಸಿಕೊಂಡವರು. ನೀರಿನ ಮಹತ್ವ ಅರಿತು ದಾಖಲೆ ರೀತಿಯಲ್ಲಿ ಕೆರೆಗಳನ್ನು ನಿರ್ಮಿಸಿ ಸಾಧನೆ ತೋರಿದ್ದಾರೆ. ಅವರ ಆಡಳಿತ, ಸಾಧನೆ ನಮಗೆ ಸದಾಕಾಲ ಸ್ಫೂರ್ತಿದಾಯಕ. ಅವರು ಸಾಧಿಸಿದ ಕೆಲಸಗಳು ಇತರರಿಗೆ ಮಾದರಿಯಾಗಿವೆ ಎಂದು ತಿಳಿಸಿದರು.

ವಿಜಯನಗರ ಕಾಲೇಜ್‌ನ ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಡಾ.ಹೆಚ್.ಎಂ.ಚಂದ್ರಶೇಖರ ಶಾಸ್ತ್ರಿ ಅವರು ವಿಶೇಷ ಉಪನ್ಯಾಸ ನೀಡಿ, ಇತಿಹಾಸದ ಪುಟಗಳಲ್ಲಿ ಕೆಂಪೇಗೌಡರ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ. ಒಬ್ಬ ರಾಜನ ಯಶಸ್ಸು ಸಿದ್ಧಾಂತದ ಬದಲು ಕಾರ್ಯಾನುಷ್ಠಾನಗೊಳಿಸುವುದರಲ್ಲಿ ಇರುತ್ತದೆ. ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ಶ್ರೀ ಕೃಷ್ಣದೇವಾರಾಯನ ಕಾಲದಲ್ಲಿ ದಸರಾ ಉತ್ಸವ ನೋಡಲು ಕೆಂಪೇಗೌಡರು ಚಿಕ್ಕ ವಯಸ್ಸಿನಲ್ಲಿ ತಂದೆಯ ಜೊತೆಗೆ ಬರುತ್ತಿದ್ದರು. ನಿರ್ದಿಷ್ಟ ನಗರ ಯೋಜನೆಯ ಜ್ಞಾನ ಹೊಂದಿದ್ದರು. ಕೃಷಿ, ನಿರಾವರಿಗಾಗಿ ಹೆಚ್ಚಿನ ಕೆರೆ ಕಾಲುವೆಗಳನ್ನು ನಿರ್ಮಿಸಿದ್ದಾರೆ. ಅವರು ತೆಲುಗು ಭಾಷೆಯಲ್ಲಿ ಸಹ ಪರಿಣಿತಿ ಹೊಂದಿದ್ದರು ಎಂದು ಹೇಳಿದರು.

ಸಮಾರಂಭದಲ್ಲಿ ಹೊಸಪೇಟೆ ತಹಶೀಲ್ದಾರ ವಿಶ್ವಜಿತ್ ಮೆಹತಾ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹರೀಶ್, ಹೊಸಪೇಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧೂ ಯಲಿಗಾರ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಾಗರಾಜ ಹವಾಲ್ದಾರ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಬಹುಮಾನ ವಿತರಣೆ: ನಾಡಪ್ರಭು ಶ್ರೀ ಕೆಂಪೇಗೌಡರ ಬಗ್ಗೆ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹೊಸಪೇಟೆಯ ಸರಕಾರಿ ಪದವಿ ಪೂರ್ವ ಕಾಲೇಜ್ ಚಿತ್ತವಾಡಿಗಿಯ ಹೆಚ್.ಕೆ.ವಿದ್ಯಾಪ್ರಿಯಾ ಹಾಗೂ ದ್ವಿತೀಯ ಸ್ಥಾನ ಪಡೆದ ಹೊಸಪೇಟೆ ಚಾರಿಟೇಬಲ್ ಪ್ರೌಢಶಾಲೆಯ ವಂದನಾ ಮತ್ತು ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹೊಸಪೇಟೆಯ ಸರಕಾರಿ ಪದವಿ ಪೂರ್ವ ಕಾಲೇಜ್ ಚಿತ್ತವಾಡಿಗಿಯ ಶಾಂಭವಿ.ಎಂ. ಹಾಗೂ ದ್ವಿತೀಯ ಸ್ಥಾನ ಪಡೆದ ಹೊಸಪೇಟೆಯ ನ್ಯಾಷನಲ್ (ಆಂಗ್ಲ ಮಾಧ್ಯಮ) ಪ್ರೌಢಶಾಲೆಯ ಗುಜ್ಜಲ್ ಹಂಸ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಬಹುಮಾನ ವಿಜೇತ ವಿದ್ಯಾರ್ಥಿಗಳ ಸಾಧನೆಗೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಲಾಯಿತು.

# ರೈಲ್ವೆ ಮೇಲ್ಸೇತುವೆ ಕಾಮಗಾರಿ ಸ್ಥಳಕ್ಕೆ ಶಾಸಕ ಹೆಚ್.ಆರ್.ಗವಿಯಪ್ಪ ಭೇಟಿ: ಪರಿಶೀಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರು ಜೂನ್ 27ರಂದು ನಗರ ಸಂಚಾರ ಕೈಗೊಂಡು ನಾನಾ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಹೊಸಪೇಟೆಯ ಅನಂತಶಯನ ಗುಡಿ ಹತ್ತಿರ ನಡೆಯುತ್ತಿರುವ ರೈಲ್ವೆ ಮೇಲ್ಸೇತುವೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ಮೊತ್ತದ ಪರಿಹಾರಕ್ಕೆ ಮತ್ತು ಬೇರೆ ಸ್ಥಳದಲ್ಲಿ ಸೂಕ್ತ ವಸತಿ ಜಾಗ ಕಲ್ಪಿಸಬೇಕು ಎನ್ನುವ ಅಲ್ಲಿನ ನಿವಾಸಿಗಳ ಬೇಡಿಕೆಗಳ ಬಗ್ಗೆ ಇದೆ ವೇಳೆ ಶಾಸಕರು ಅಲ್ಲಿನ ನಿವಾಸಿಗಳೊಂದಿಗೆ ಸುಧೀರ್ಘ ಚರ್ಚಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಸ್ಥಳೀಯ ನಿವಾಸಿಗಳ ಬೇಡಿಕೆಗಳಾದ ಹೆಚ್ಚಿನ ಮೊತ್ತದ ಪರಿಹಾರ ಮತ್ತು ಈ ಕಾಮಗಾರಿಯಿಂದ ತೊಂದರೆ ಆಗುವ ನಿವಾಸಿಗಳಿಗೆ ಬೇರೆ ಸ್ಥಳದಲ್ಲಿ ಸೂಕ್ತ ವಸತಿ ಜಾಗ ಕಲ್ಪಿಸುವ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿ ಸೂಕ್ತ ಪರಿಹಾರ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಮಹಮ್ಮದ್ ಅಲಿ ಅಕ್ರಮ ಷಾಹ, ಭೂ ದಾಖಲೆಯ ಅಧಿಕಾರಿಗಳು ಮತ್ತು ಸ್ಥಳೀಯರು ಇದ್ದರು.

## ವಾರ್ತಾ ಇಲಾಖೆಯಿಂದ ಶ್ರೀ ಕೆಂಪೇಗೌಡ ಜಯಂತಿ ಆಚರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿಯನ್ನು ಹೊಸಪೇಟೆ ನಗರದಲ್ಲಿನ ತಾಲೂಕು ಕಚೇರಿ ಆವರಣದಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಜೂನ್ 27ರಂದು ಆಚರಿಸಲಾಯಿತು.

ಪ್ರಥಮ ದರ್ಜೆ ಸಹಾಯಕರಾದ ಕೆ.ರಾಮಾಂಜನೇಯ, ಸಿಬ್ಬಂದಿ ಪಿ.ಕೃಷ್ಣಸ್ವಾಮಿ, ಹೊರಗುತ್ತಿಗೆ ನೌಕರರಾದ ಲಕ್ಷ್ಮೀ ಪೂಜಾರ, ತಾಯೇಶ ಜಿ, ಅಪ್ರೆಂಟಿಶಿಪ್ ತರಬೇತುದಾರರಾದ ಆಕಾಶ ಗೌಡ್ರ, ಶಂಕರ.ಹೆಚ್ ಅವರು ನಾಡಪ್ರಭು ಶ್ರೀ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಿದರು.

# ತರಬೇತಿಯೊಂದಿಗೆ ಸ್ವ-ಉದ್ಯೋಗ ಆರಂಭಿಸಿ

### ಉಪನ್ಯಾಸಕ ಜಡೆಪ್ಪ ಹೇಳಿಕೆ | ಧರ್ಮಸ್ಥಳ ಸಂಸ್ಥೆಯಿಂದ ಸ್ವ-ಉದ್ಯೋಗ ಪ್ರೇರಣಾ ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**

ಕೌಶಲ್ಯಯುತ ಜ್ಞಾನ, ಅನುಭವದ ಜೊತೆ ಸೂಕ್ತ ತರಬೇತಿ ಪಡೆದುಕೊಂಡು ಸ್ವಯಂ ಉದ್ಯೋಗ ಆರಂಭಿಸಿದರೆ ಯಶಸ್ಸು ದೊರೆಯಲಿದೆ.

ಮಹಿಳೆಯರು ಸ್ವಾವಲಂಬಿ ಬುದುಕು ಕಟ್ಟಿಕೊಳ್ಳಲು ಸ್ವ-ಉದ್ಯೋಗ ಸಹಕಾರಿಯಾಗಲಿವೆ ಎಂದು ಉಪನ್ಯಾಸಕ ಜಡೆಪ್ಪ ಹೇಳಿದರು.

ನಗರದ ಈಶ್ವರ ನಗರದಲ್ಲಿ ಅಂಬೇಡ್ಕರ ಭವನದಲ್ಲಿ ಗುರುವಾರ ನಗರದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. (ಟ್ರಸ್ಟ್ (ರಿ) ಹಮ್ಮಿಕೊಂಡಿದ್ದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ, ಸ್ವ-ಉದ್ಯೋಗ ಪ್ರೇರಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸದಾ ಸಮಾಜಮುಖಿ ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಸ್ವ-ಉದ್ಯೋಗ ಕಂಡುಕೊಳ್ಳಲು ಸರ್ಕಾರ ಸೇರಿದಂತೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಬೆಂಬಲವಾಗಿ ನಿಂತಿವೆ. ಉದ್ಯಮ ಎಂದಾಕ್ಷಣ ಕೈಗಾರಿಕೆಗಳನ್ನೇ ಸ್ಥಾಪಿಸಬೇಕೆಂದಿಲ್ಲ. ಸಣ್ಣ ಸಣ್ಣ ಉದ್ಯಮಗಳು ನಿರೀಕ್ಷೆಗೂ ಮೀರಿ ಲಾಭ ತಂದುಕೊಡುತ್ತವೆ. ಮಹಿಳೆಯರಲ್ಲಿ ಏನಾದರೂ ಮಾಡಬೇಕೆಂಬ ಆಸೆ ಇರುತ್ತದೆ. ತಮ್ಮಳೊಗಿರುವ ಆಸಕ್ತಿಯನ್ನು ಹಂಚಿಕೊಂಡಾಗ ಅದಕ್ಕೊಂದು ತರಬೇತಿ ಪಡೆಯಬಹುದು.



ಬ್ಯೂಟಿಪಾರ್ಲರ್, ಹೋಟೆಲ್, ಟೈಲರಿಂಗ್, ತಿಂಡಿ ತಿನಿಸು, ವಸ್ತ್ರ ಮಾರಾಟ, ಹೈನುಗಾರಿಕೆ ಸೇರಿದಂತೆ ವಿವಿಧ ಸ್ವ-ಉದ್ಯೋಗಗಳನ್ನು ಆರಂಭಿಸಿ, ಸ್ವಾವಲಂಬಿಗಳಾಗಿ ಎಂದರು.

ಯೋಜನಾಧಿಕಾರಿ ಎಸ್ ಮಾರುತಿ ಮಾತನಾಡಿ, ಸಾಮಾಜಿಕ ಚಿಂತಕರಾದ ವೀರೇಂದ್ರ ಹೆಗ್ಗಡೆಯವರು ವೃದ್ಧರಿಗೆ ತಿಂಗಳಿಗೆ ಒಂದು ಸಾವಿರ ಪಿಂಚಣಿ, ಸೂರು ಇಲ್ಲದವರಿಗೆ ಸೂರು ನಿರ್ಮಿಸಿಕೊಳ್ಳಲು ಆರ್ಥಿಕ ನೆರವು, ರುದ್ರಭೂಮಿಗೆ ಆರ್ಥಿಕ ನೆರವು, ಅಂಗವಿಕಲರಿಗೆ ವ್ಹೀಲ್ ಚೇರ್‌ಗಳನ್ನು ಕೊಡುವುದರ ಮೂಲಕ ಜನರ ಜೀವನ ಸುಗಮವಾಗಿಸಲು ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಸೇವೆ ಮಾಡುತ್ತಿದ್ದಾರೆ. ಜನರು ಸ್ವಯಂ ಪ್ರೇರಣೆಯಿಂದ ಸಂಸ್ಥೆಯ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ವರದಿಗಾರರಾದ ಇಂದಿರಾ ಕಲಾಲ್ ಮಾತನಾಡಿ, ಸ್ವ-ಉದ್ಯೋಗ ಮಾಡಬೇಕೆಂಬ ಛಲವಿದ್ದವರು ಸೂಕ್ತ ತರಬೇತಿ ಪಡೆದು, ಸರ್ಕಾರ ಮತ್ತು ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಉದ್ಯೋಗ ಆರಂಭಿಸಬಹುದು. ಮಾರ್ಗದರ್ಶನದ ಕೊರತೆಯಿಂದ ಅನೇಕ ಮಹಿಳೆಯರು ಸ್ವ-ಉದ್ಯೋಗದಲ್ಲಿ ತೊಡಗಿಸಿಕೊಳ್ಳುತ್ತಿಲ್ಲ. ಕೌಶಲ್ಯದ ಕೊರತೆಯಿಂದ ನಿರುದ್ಯೋಗಿಗಳಾಗುತ್ತಿದ್ದಾರೆ. ಕೌಶಲ್ಯವುಳ್ಳವರೂ ಎಂದೂ ನಿರುದ್ಯೋಗಿಯಾಗಲಾರರು. ಸಣ್ಣ ಕೆಲಸಕ್ಕೂ ತರಬೇತಿ ಅಗತ್ಯವಿದೆ. ತರಬೇತಿ, ಮಾರ್ಗದರ್ಶನದೊಂದಿಗೆ ಆರಂಭಿಸಿದ ಉದ್ಯೋಗಗಳು ಭವಿಷ್ಯದಲ್ಲಿ ದೊಡ್ಡ ಉದ್ಯಮಗಳಾಗಲಿವೆ ಎಂದರು.

ವೀರೇಶ ಕುಮಾರ ಅಧ್ಯಕ್ಷತೆವಹಿಸಿದ್ದರು. ಜನಜಾಗೃತಿ ವೇದಿಕೆ ಕೋಶಾಧಿಕಾರಿ ಪ್ರಕಾಶ ಉಪಸ್ಥಿತರಿದ್ದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ಎಸ್.ಎಂ.ರೇಖಾ ನಿರ್ವಹಿಸಿದರು.

## ಇಂದು ಈಡಿಎಸ್ ಚಟುವಟಿಕೆಗೆ ಜಿಪಂ ಸಿಇಓಯಿಂದ ಚಾಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ಡೆಂಗಿ ಜ್ವರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರತಿ ಶುಕ್ರವಾರ ಈಡಿಸ್ ಲಾರ್ವಾ ಉತ್ಪತ್ತಿ ತಾಣಗಳನ್ನು ನಾಶ ಪಡಿಸುವ ಚಟುವಟಿಕೆಗೆ ಜೂನ್ 28ರಂದು ರಾಜ್ಯಾದ್ಯಂತ ಏಕಕಾಲದಲ್ಲಿ ಚಾಲನೆ ಸಿಗಲಿದ್ದು, ಅದರಂತೆ ವಿಜಯನಗರ ಜಿಲ್ಲೆಯಲ್ಲಿಯು ಸಹ ಈ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ನಗರದ 100 ಹಾಸಿಗೆಯ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಬೆಳಗ್ಗೆ 9.15ಕ್ಕೆ ಚಾಲನೆ ನೀಡಲಿದ್ದಾರೆ.

ಪ್ರಸ್ತುತ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಡೆಂಗಿ ಜ್ವರ ಪ್ರಕರಣಗಳು ಏರಿಕೆಯಾಗಿದ್ದು, ಪ್ರಸಕ್ತ ಮಳೆಗಾಲ ಹಾಗೂ ನಂತರದ ದಿನಗಳಲ್ಲಿ ರೋಗ ಪ್ರಸರಣವು ಇನ್ನೂ ಹೆಚ್ಚುವ ಸಾಧ್ಯತೆ ಇದೆ. ವಾಡಿಕೆಯಂತೆ ಏಪ್ರಿಲ್-ಮೇ ಮಾಹೆಯಿಂದಲೂ ಡೆಂಗಿ ಜ್ವರ ನಿಯಂತ್ರಣ ಕ್ರಮಗಳನ್ನು ಆರೋಗ್ಯ ಇಲಾಖೆಯು ಆದ್ಯತೆಯ ಮೇಲೆ ಅನುಷ್ಠಾನಗೊಳಿಸುತ್ತಿದ್ದರು ಸಹ ಇತರೆ ಇಲಾಖೆಗಳು ಹಾಗೂ ಸಾರ್ವಜನಿಕರ ಪೂರ್ಣ ಸಹಕಾರವಿಲ್ಲದೆ, ಡೆಂಗಿ ಜ್ವರ ನಿಯಂತ್ರಣ ಅಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಶುಕ್ರವಾರ ಸಾರ್ವಜನಿಕರು ಸ್ವತಃ ತಮ್ಮ ಮನೆಗಳು, ಕಚೇರಿಗಳು, ಶಾಲಾ-ಕಾಲೇಜುಗಳು, ಇತ್ಯಾದಿಗಳಲ್ಲಿ ನೀರು ತುಂಬುವ ಪರಿಕರಗಳನ್ನು (ಸಿಮೆಂಟ್ ತೊಟ್ಟಿ, ಡ್ರಂ, ಬ್ಯಾರೆಲ್, ಇತ್ಯಾದಿ) ಸ್ವಚ್ಛಗೊಳಿಸುವುದು, ಮಳೆ ನೀರು ಸಂಗ್ರಹವಾಗುವ ಘನತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದರ ಮೂಲಕ, ಡೆಂಗಿ ಜ್ವರ ನಿಯಂತ್ರಣ ಕ್ರಮದಲ್ಲಿ ಅತಿ ಮುಖ್ಯವಾದ ಈಡಿಸ್ ಸೊಳ್ಳೆಗಳ ಉತ್ಪತ್ತಿ >>3

ಹಂಪಿ ಟೈಮ್ಸ್ HAMPI TIMES

# ವಿಜ್ಞಾನ

## ಕಪ್ಪೆಗಳ ದೇಹ ಏಕೆ ಒದ್ದೆಯಾಗಿರುತ್ತದೆ?

■ ಆರ್.ಬಿ.ಗುರುಬಸವರಾಜ

ಸಲ್ಮಾ ಮನೆಯ ಹಿತ್ತಲಿನಲ್ಲಿ ಗಿಡಕ್ಕೆ ನೀರು ಹಾಕುತ್ತಿದ್ದಳು. ಟಣ್ಣನೆ ಕಪ್ಪೆಯೊಂದು ಹಾರಿ ಬಂದು ಅವಳ ಕಾಲಿನ ಪಾದದ ಮೇಲೆ ಕುಳಿತಿತು. ಕಾಲು ಒದರಿದಳು. ಆದರೆ ಕಪ್ಪೆ ಅಲ್ಲಿಂದ ಕದಲಲಿಲ್ಲ. ಅನಿವಾರ್ಯವಾಗಿ ಕೈಯಿಂದ ತೆಗೆದುಹಾಕಲು ಮುಂದಾದಳು. ಕಪ್ಪೆಯನ್ನು ಕೈಯಿಂದ ಮುಟ್ಟುತ್ತಲೇ ಕೈ ಹಿಂತೆಗೆದುಕೊಂಡಳು. ಪಕ್ಕದಲ್ಲಿ ಇದನ್ನೆಲ್ಲಾ ನೋಡುತ್ತಿದ್ದ ಗೆಳತಿ ಪ್ರಜ್ಞ 'ಏನಾಯ್ತು?' ಎಂದಳು. "ಕಪ್ಪೆಯ ದೇಹ ಒದ್ದೆಯಾಗಿ, ತಣ್ಣಗಿತ್ತು" ಎಂದಳು. ನಂತರ ಒಂದು ಕಟ್ಟಿಗೆಯ ತುಂಡಿನಿಂದ ಕಪ್ಪೆಯನ್ನು ಅಲ್ಲಿಂದ ಓಡಿಸಿದಳು. ನಳದ ಬಳಿ ತೆರಳಿ ಕೈಕಾಲು ತೊಳೆದುಕೊಂಡು ಒಳಗೆ ಬಂದಳು. ಅಲ್ಲಿಯೇ ಇದ್ದ ತಾತನಿಗೆ "ತಾತ ಕಪ್ಪೆಯ ದೇಹ ಏಕೆ ಒದ್ದೆಯಾಗಿರುತ್ತದೆ?" ಎಂದಳು. ಅದಕ್ಕೆ ತಾತ ಹೀಗೆ ಹೇಳತೊಡಗಿದರು.



ಕಪ್ಪೆಗಳು ತೇವಾಂಶವುಳ್ಳ ಚರ್ಮವನ್ನು ಹೊಂದಿದ್ದು ಅದು ಹಲವಾರು ಪ್ರಮುಖ ಕಾರ್ಯ ಗಳನ್ನು ನಿರ್ವಹಿಸುತ್ತದೆ. ಮೊದಲನೆಯದಾಗಿ ಕಪ್ಪೆಗಳು ಚರ್ಮದ ಮೂಲಕ ಉಸಿರಾಡುತ್ತವೆ. ಈ ಪ್ರಕ್ರಿಯೆಯನ್ನು ಚರ್ಮದ ಉಸಿರಾಟ ಎಂದು ಕರೆಯಲಾಗುತ್ತದೆ. ಜಲಚರಗಳಾದ ಕಪ್ಪೆಗಳಿಗೆ ಇದು ಮುಖ್ಯವಾಗಿದೆ. ಕಪ್ಪೆಗಳು ತಮ್ಮ ಚರ್ಮದ ಮೂಲಕ ನೀರಿನಿಂದ ನೇರವಾಗಿ ಆಮ್ಲಜನಕವನ್ನು ಹೀರಿಕೊಳ್ಳುತ್ತವೆ.

ಎರಡನೆಯದಾಗಿ ಕಪ್ಪೆಗಳು ಎಕ್ಟೋಥರ್ಮಿಕ್‌ಗಳಾಗಿವೆ. ಅಂದರೆ ಅವು ತಮ್ಮ ದೇಹದ ಉಷ್ಣತೆಯನ್ನು ನಿಯಂತ್ರಿಸಲು ಶಾಖದ ಬಾಹ್ಯ ಮೂಲಗಳನ್ನು ಅವಲಂಬಿಸಿವೆ. ಕಪ್ಪೆಯ ಚರ್ಮವು ಒದ್ದೆಯಾದಾಗ ತೇವಾಂಶವು ಆವಿಯಾಗುತ್ತದೆ ಮತ್ತು ಕಪ್ಪೆಯ ದೇಹವನ್ನು ತಂಪಾಗಿಸುತ್ತದೆ. ಅದಕ್ಕಾಗಿಯೇ ಕಪ್ಪೆಗಳು ನೀರಿನಲ್ಲಿ ಅಥವಾ ನೀರಿನ ಹತ್ತಿರದಲ್ಲಿ ಕುಳಿತುಕೊಳ್ಳುವುದನ್ನು ಗಮನಿಸಿರಬಹುದು.

ಕೊನೆಯದಾಗಿ ಅದರ ತೇವಾಂಶವುಳ್ಳ ಚರ್ಮವು ಪರಭಕ್ಷಕಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ. ತೇವಾಂಶವು ಕೆಲವು ಪರಭಕ್ಷಕಗಳಿಗೆ ಅವುಗಳನ್ನು ಹಿಡಿಯಲು ಕಷ್ಟವಾಗುತ್ತದೆ. ಕೆಲವು ಜಾತಿಯ ಕಪ್ಪೆಗಳು ತಮ್ಮ ಚರ್ಮದ ಮೇಲೆ ಲೋಳೆಯನ್ನು ಸ್ರವಿಸುತ್ತದೆ. ಇದು ಪರಭಕ್ಷಕಗಳಿಂದ ಹೆಚ್ಚುವರಿ ರಕ್ಷಣೆಯನ್ನು ನೀಡುತ್ತದೆ ಮತ್ತು ಅವುಗಳ ಚರ್ಮವನ್ನು ತೇವವಾಗಿರಿಸಿಕೊಳ್ಳಲು ಸಹಾಯ ಮಾಡುತ್ತದೆ.

ಎಲ್ಲಾ ಕಪ್ಪೆಗಳ ಚರ್ಮವು ತೇವವಾಗಿರುವುದಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಕೆಲವು ಪ್ರಭೇದಗಳು ಒಣ ಚರ್ಮವನ್ನು ಹೊಂದಿರುತ್ತವೆ. ಕೆಲವು ಲೋಳೆಯಂತಹ ದಪ್ಪ ಪದರದಲ್ಲಿ ಲೇಪಿತವಾದ ಚರ್ಮವನ್ನು ಹೊಂದಿರುತ್ತವೆ. ಕಪ್ಪೆಯ ದೇಹದ ಮೇಲಿನ ತೇವಾಂಶದ ಪ್ರಮಾಣವು ಅದರ ಪರಿಸರ, ತೇವಾಂಶದ ಮಟ್ಟ ಮತ್ತು ಅದರ ನಡವಳಿಕೆಯನ್ನು ಅವಲಂಬಿಸಿರುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಗೆದ್ದರೆ ಸಂತೋಷ ಸೋತರೆ ಅನುಭವ...

ಬದುಕಿನಲ್ಲಿ ಸೋಲು-ಗೆಲುವುಗಳು ನಾಣ್ಯದ ಎರಡು ಮುಖಗಳು. ಸಾಧನೆಯ ಹಾದಿಯಲ್ಲಿ ಇವು ಸದಾ ಜೊತೆಯಲ್ಲಿರುತ್ತವೆ. ಸೋತಾಗ ಕುಗ್ಗದೇ ಗೆದ್ದಾಗ ಹಿಗ್ಗದೇ ಸಮಾನಸ್ಥಿತಿಯಲ್ಲಿ ಮನವನ್ನು ಕಾಪಾಡಿಕೊಳ್ಳುವುದು. ಪರಿಸ್ಥಿತಿಗೆ ಹೊಂದಿಕೊಳ್ಳುವುದನ್ನು ಕಲಿತರೆ ಬದುಕುವುದನ್ನು ಕಲಿತಂತೆಯೇ. ಸಾಧನೆ ಒಂದೆರೆಡು ದಿನಗಳು ಅಥವಾ ತಿಂಗಳುಗಳಲ್ಲಿ ನಡೆಯುವುದಿಲ್ಲ. ಕಷ್ಟಪಡದೇ ಮಾಡಿದ ಸಾಧನೆ ಬಹಳ ಕಾಲ ಇರದು. ಶ್ರಮದಿಂದ ಗಳಿಸಿದ ಯಶಸ್ಸು ಬಹಳ ಕಾಲ ಇರುತ್ತದೆ. ಈ ಸತ್ಯ ಗೊತ್ತಿಲ್ಲದೆ ನಿರಾಸೆಗೀಡಾದರೆ ಅದಕ್ಕೆ ಕಾರಣ ನಮ್ಮ ಭ್ರಮೆ. ಯಾವುದಕ್ಕೂ ಉದ್ವೇಗಕ್ಕೊಳಗಾಗದಿರುವುದು. "Man propossess, God dispossess" ಮನುಷ್ಯ ಪ್ರಯತ್ನದ ಮುಂದೆ ಯಾವುದೂ ಅಸಾಧ್ಯವಾದುದಿಲ್ಲ ಹಾಗೂ ವಿಧಿ ಲಿಖಿತದ ಮುಂದೆ ಏನೂ ಮಾಡಲಾಗುವುದಿಲ್ಲವಾದರೂ, ಎಲ್ಲವೂ ಹಣೆಬರಹವೆಂದು ಕೂರುವುದು ಸರಿಯಲ್ಲ. ಹಣೆಬರಹವನ್ನು ನಮ್ಮ ಕೈಗೆ ತೆಗೆದುಕೊಂಡು ಅದನ್ನೇ ಬದಲಾಯಿಸಬೇಕು. ಹಾಗಂತ ವಾಮ ಮಾರ್ಗದಿಂದ ಗಳಿಸಿದ ಜಯ ಅಥವಾ ಯಶಸ್ಸು ಸೋಲಿಗೆ ಸಮ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471


Hampi Times E-paper SCAN AND READ

ಡಾ. ರಾಜಕುಮಾರ್ ಅವರು ಹಾಡಿರುವಂತೆ "ಸೋಲೆ ಗೆಲುವೆಂದು ಅರಿತಾಗ ತಾನೇ ಎಲ್ಲ ಅಪನಿಂದೆ ಅಪಮಾನ ಬಹುಮಾನದಂತೆ" ತೇನ್‌ಸಿಂಗ್ ಪರ್ವತವನ್ನು ಎಂಟು ಬಾರಿ ಏರಲಾಗದೇ ಸೋತಾಗಲೂ ಛಲ ಬಿಡದೇ ಒಂಭತ್ತನೇ ಬಾರಿ ಹತ್ತಲು ಸಾಧ್ಯವಾಯಿತಂತೆ. ಯಶಸ್ಸು ಪಡೆಯಲು ಯಾವುದೇ ರಾಜಮಾರ್ಗವಿಲ್ಲ. ತಾತ್ಕಾಲಿಕವಾದರೂ ಋಜು ಮಾರ್ಗದಲ್ಲೇ ನಾವು ನಡೆಯಬೇಕು. ಆದರೆ ಯಶಸ್ಸಿನ ಬಳಿಕ ಪ್ರತಿಯೊಂದೂ ರಾಜಮಾರ್ಗ ಎನಿಸುತ್ತದೆ. ಮರಳಿ ಯತ್ನವ ಮಾಡುವುದರಲ್ಲಿ ತಪ್ಪಿಲ್ಲ.

ಇರುವೆಯೊಂದು ಗೋಡೆಯನ್ನೇರುವಾಗ ಮತ್ತೆ ಮತ್ತೆ ಬೀಳುತ್ತದೆ. ಆದರೆ ತನ್ನ ಸಾಮರ್ಥ್ಯಕ್ಕಿಂತಲೂ ಹೆಚ್ಚು ಪ್ರಯತ್ನ ಮಾಡಿ ಮೇಲೆ ತುದಿಯ ವರೆಗೂ ಹೋಗಿರುವುದನ್ನು ನಾವು ನೋಡಿದ್ದೇವೆ. ಪ್ರವಾಹ ದೆದುರು ಈಜು ವವರಿಗೆ ಮಾತ್ರವೇ ಅದರ ಪ್ರಭಾವದ ಅರಿವಿರುತ್ತದೆ. ಆದ್ದರಿಂದ ಅಂಥದ್ದೊಂದು ಮನೋ ಭಾವವನ್ನು ನಾವು ಜೀವನದಲ್ಲಿ ಸಂದರ್ಭಾ ನುಸಾರ ಬೆಳೆಸಿಕೊಳ್ಳಬೇಕು. ಎಲ್ಲೆಡೆ ಸರಳ ಮಾರ್ಗ ದೊರೆಯುವುದು ದುಸ್ತರ. ಆದ್ದರಿಂದ ಕಠಿಣ ಮಾರ್ಗ ಸವೆಸಲು ನಾವು ಸದಾ ಸಿದ್ಧರಾಗಬೇಕು.

ಕತ್ತೆಯೊಂದು ನೀರಿಲ್ಲದ ಬಾವಿಯಲ್ಲಿ ಬಿದ್ದಿತ್ತು. ನೋಡಿದವರು ಅದನ್ನು ಮೇಲಕ್ಕೆತ್ತದೆ ಕಲ್ಲೆಸೆ ಯತೊಡಗಿದರು. ಆ ಒಂದೊಂದೆ ಕಲ್ಲುಗಳ ಮೇಲೆ ಕತ್ತೆ ನಿಲ್ಲುತ್ತಾ ನಿಲ್ಲುತ್ತಾ ಮೇಲಕ್ಕೆ ಬಂದು ಅದೇ ಬಾವಿಯಿಂದ ಅದು ಹೊರ ನಡೆಯಿತು. ಅಂದರೆ ಸೋತಾಗ ಅನ್ನುವವರ ಬಾಯಿಗೆ ವಸ್ತುವಾಗಬಹುದು. ಜೀವನದಲ್ಲಿ ಒಂದು ಅವಕಾಶ ತಪ್ಪಿದರೆ 'ಚಿಂತೆ' ಮಾಡುತ್ತಾ ಕೂಡದೇ 'ಚಿಂತನೆ' ಮಾಡಿ ಮುಂದಿನ ಅವಕಾಶಗಳಿಗೆ ಸಿದ್ಧರಾಗಬೇಕು. ನಾವು ತುಳಿತಕ್ಕೊಳಗಾಗಿದ್ದೇವೆ ಎಂದರೆ ನಮಗೆ ಆಯ್ಕೆಗಳಿಲ್ಲ ಎಂದರ್ಥ. ಇಂಥ ಸ್ಥಿತಿಯಿಂದ ಹೊರಬರಬೇಕಾದಲ್ಲಿ ನಾವು ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು.

ಪ್ರತಿದಿನವೂ ಹೊಸ ನಿರೀಕ್ಷೆಯೊಂದಿಗೆ ಪ್ರಾರಂಭವಾದರೂ ಹೊಸ ಅನುಭವದೊಂದಿಗೆ ಅದು ಅಂತ್ಯವಾಗುತ್ತದೆ. ಆದ್ದರಿಂದ ಜೀವನದ ಪ್ರತಿ ಕ್ಷಣವನ್ನೂ ಆಸ್ವಾದಿಸಬೇಕು-ಅನುಭವಿಸಬೇಕು. ಏಕೆಂದರೆ ಪ್ರತಿ ಗಳಿಗೆಯೂ ಹೊಸ ಹೊಸ ಪಾಠವನ್ನು ನಮಗೆ ಅದು ಕಲಿಸಿಕೊಡುತ್ತದೆ.




ಬೆಟ್ಟ ಅಥವಾ ಬೃಹತ್ತ ಕಲ್ಲುಬಂಡೆ ಎಷ್ಟೇ ಎತ್ತರದಲ್ಲಿದ್ದರೂ ಒಮ್ಮೆ ನಾವು ಧೈರ್ಯಮಾಡಿ ಏರಿದಾಕ್ಷಣ ಅದು ನಮ್ಮ ಪಾದದಡಿಯಲ್ಲಿರುತ್ತದೆ. ಅಂದರೆ ಈ ಜಗತ್ತಿನಲ್ಲಿ ಆತ್ಮವಿಶ್ವಾಸಕ್ಕಿಂತ ಯಾವುದೂ ಎತ್ತರವಿಲ್ಲ-ದೊಡ್ಡದಿಲ್ಲ. ಸಮಸ್ಯೆ ಬಂದಾಗ ಅಧೀರರಾಗದೇ ಎರಡೂ ಕಣ್ಣುಮುಚ್ಚಿ ಕೆಲಹೊತ್ತು ಹೃದಯದ ಮಾತನ್ನು ಕೇಳಬೇಕು. ಏಕೆಂದರೆ ಹೃದಯ 'ಲೆಫ್ಟ'ನಲ್ಲಿದ್ದರೂ ಅದು ಸದಾ 'ರೈಟ್' ಆಗಿರುತ್ತದೆ.

ಸರಿಯಾದ ಸಮಯದಲ್ಲಿ ನಾವು ಪಾಠ ಕಲಿಯದಿದ್ದರೆ ನಿಸರ್ಗವು ನಮ್ಮ ತಪ್ಪಿನ ಸಮಯದಲ್ಲಿ ತಕ್ಕ ಪಾಠ ಕಲಿಸುತ್ತದೆ. ಒಟ್ಟಾರೆ ಗೆಲುವು(ಯಶಸ್ಸು), ಸೋಲು(ವೈಫಲ್ಯ) ಅಂತಿಮವಲ್ಲ. ಗೆದ್ದಾಗ ಸೋಲಿನ ಅನುಭವ ಇರಲಿ. ಸೋತಾಗ ಗೆಲುವಿನ ಆಶಾಭಾವವೂ ಇರಲಿ.

# ಜಂಗಮಕ್ಷೇತ್ರ ಲಿಂಗನಾಯಕನಹಳ್ಳಿ ಹಾಗೂ ಮೈಲಾರದ ಬಸವಲಿಂಗ ಶರಣರು

ಹಲವು ಮಾತೇನು ನೀನೊಲಿದು ಪಾದವನಿಟ್ಟ ನೆಲವೇ ಸುಕ್ಷೇತ್ರ ಜಲವೇ ಪಾವನ ತೀರ್ಥ ಸುಲಭ ಶ್ರೀ ಗುರುವೇ ಕೃಪೆಯಾಗು.

ಈ ತ್ರಿವಧಿಯನ್ನು ಮೈಲಾರದ ಬಸವಲಿಂಗ ಶರಣರು ತಮ್ಮ ಗುರುಗಳಾಗಿದ್ದ ಲಿಂಗನಾಯಕನಹಳ್ಳಿಯ ಪೂಜ್ಯ ಶ್ರೀ ಚನ್ನವೀರ ಸ್ವಾಮಿಗಳನ್ನು ಕುರಿತು ರಚಿಸಿದ ತ್ರಿವಧಿ ಇಂತಹ 333 ತ್ರಿವೇಧಿಗಳನ್ನು ರಚಿಸಿದ ಹೆಗ್ಗಳಿಕೆ ಇವರದ್ದು.ಇಷ್ಟೇಅಲ್ಲ ಷಟ್ ಸ್ಥಲ ಸಾಹಿತ್ಯವನ್ನು ಸಹ ರಚಿಸಿ ಶರಣ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ ಹೆಗ್ಗಳಿಕೆ ಮೈಲಾರದ ಬಸವ ಲಿಂಗ ಶರಣರದ್ದು, ಇದನೆಲ್ಲ ಸಾಧ್ಯ ಮಾಡಲು ಸಾಧ್ಯವಾದದ್ದು ಲಿಂಗನಾಯಕನಹಳ್ಳಿ ಶ್ರೀಮಠ ಹಾಗೂ ಶ್ರೀ ಚನ್ನವೀರ ಸ್ವಾಮಿಗಳು.

ಇಂದಿನ ವಿಜಯನಗರ ಜಿಲ್ಲೆಯ ಹಡಗಲಿ ತಾಲೂಕಿನ ಲಿಂಗನಾಯಕನಹಳ್ಳಿ ಒಂದು ಚಿಕ್ಕ ಗ್ರಾಮ .ತುಂಗಭದ್ರ ತಟದಲ್ಲಿರುವ ಈ ಗ್ರಾಮವು 260 ವರ್ಷಗಳ ಹಿಂದೆಯೇ ಹಾಗೂ ಈಗಲೂ ಜಂಗಮ ಕ್ಷೇತ್ರವೆಂದು ಪ್ರಸಿದ್ಧಿ ಪಡೆದುಕೊಂಡಿದೆ.

ಲಿಂಗನಾಯಕನಹಳ್ಳಿ ಮಠದಲ್ಲಿದ್ದ ಪೂಜ್ಯರಾಗಿದ್ದ ಶ್ರೀ ಚನ್ನವೀರ ಶಿವಯೋಗಿಗಳ ಕಾರ್ಯಗಳಿಂದ, ಪರಂಪರೆಯಿಂದಾಗಿ, ಶಿಷ್ಯರ ಬಳಗದ ಸಾಧನೆ, ಲಿಂಗ ಸಂಸ್ಕೃತಿ ಹಾಗೂ ಸಾಹಿತ್ಯ ಸಂಸ್ಕೃತಿಗೆ ಮಹತ್ತರ ಕೊಡುಗೆಗಳನ್ನು ನೀಡಿದ ಚರಿತ್ರೆ ಶ್ರೀ ಮಠಕ್ಕೆ ಸಲ್ಲುತ್ತದೆ. ಈ ಮಠವು ಸಾಧಕರ ನೆಲೆಯಾಗಿತ್ತು. ಈ ಮಠದಲ್ಲಿ ಶರಣರ ಚಿಂತನ ಮಂಥನಗಳು ಶಿವಾನುಭವ ಗೋಷ್ಠಿಗಳು ಮೊದಲಾದವು ನಡೆದಿದ್ದು ಒಂದು ಚರಿತ್ರೆಯೇ ಆಗಿದೆ. ಈ ಮಠದೊಂದಿಗಿನ ಸಂಪರ್ಕದಿಂದಾಗಿ ಹಾಗೂ ಅನೇಕರು ಸಾಧಕರಾಗಿ ಶರಣ ಪರಂಪರೆಯಲ್ಲಿ ಸಾಧನೆ ಮಾಡಿದ್ದಾರೆ. ಅವರಲ್ಲಿ ಪ್ರಮುಖರಾಗಿ ಮುಳುಗುಂದದ ಬಾಲಲೀಲ ಮಹಾಂತಶಿವಯೋಗಿಗಳು, ಮೈಸೂರು ಶಿವಬಸವ ಸ್ವಾಮಿಗಳು, ಚಿತ್ರದುರ್ಗದ ರಾಚೋಟಿ ಸ್ವಾಮಿಗಳು, ಶಾಂತವೀರ ಸ್ವಾಮಿಗಳು, ಮೈಲಾರದ ಬಸವಲಿಂಗ ಶರಣರು, ಬನ್ನಿಮಟ್ಟಿ ಚನ್ನಪ್ಪ ಶರಣರು, ಹೊಳಲಿನ ಲಿಂಗಪ್ಪ ಶರಣರು, ಚಿಕ್ಕ ಕಬ್ಬೂರಿನ ಲಿಂಗಪ್ಪ ಶರಣರು ಮೊದಲಾದ ಶರಣರ ಸಾಧಕರ, ಅನುಭಾವಿಗಳ ನೆಲೆ ಬಿಡಾಗಿತ್ತು. ಎಲ್ಲ ಸಾಧಕರ ,ಶರಣರಿಗೆ ಮುಕುಟಮಣಿಗಳಾಗಿದ್ದವರು ಶ್ರೀಮಠದ ಪೂಜ್ಯಶ್ರೀ ಚನ್ನವೀರ ಶ್ರೀಯೋಗಿಗಳು. 260ವರ್ಷಗಳ ಹಿಂದೆಯೇ ಶ್ರೀ ಮಠವು ಉತ್ತರ ಕರ್ನಾಟಕದಲ್ಲೇ ಪ್ರಸಿದ್ಧಿಯಾದ ಮಠವಾಗಿತ್ತು.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Hampi Times E-paper SCAN AND READ

ಆಧುನಿಕ ಮಾಲಿನ್ಯಗಳಿಂದ ಇಂದಿಗೂ ಮುಕ್ತವಾಗಿರುವ ಶ್ರೀ ಮಠವು ಅಧ್ಯಯನ, ಸಾಧನೆ ಮಾಡುವವರಿಗೆ ಹೇಳಿ ಮಾಡಿಸಿದ ಸ್ಥಳವಾಗಿದೆ. ಶ್ರೀಮಠದ ಮೂಲ ಕರ್ತೃಗಳಾದ ಹಾಲವರ್ತಿ ಶಿವಾನುಭವ ಚರವರ್ಯ ಲಿಂಗನಾಯಕನಹಳ್ಳಿ, ಶ್ರೀ ಚನ್ನವೀರ ಶಿವಯೋಗಿಗಳು ಕ್ರಿಸ್ತಶಕ 1760 ರಿಂದ 1850ರ ಕಾಲಾವಧಿಯಲ್ಲಿ ಜೀವಿಸಿದ್ದವರು.ಶ್ರೀ ಚನ್ನವೀರ ಶಿವಯೋಗಿಗಳು ಪ್ರಾರಂಭಿಸಿದ ಮಠದ ಪರಂಪರೆ ಪ್ರಸಾದ ಸ್ವಾಮಿಗಳು, ನಂಜುಂಡಸ್ವಾಮಿಗಳು, ಗುರುಲಿಂಗ ಸ್ವಾಮಿಗಳು, ಬಸವಲಿಂಗ ಸ್ವಾಮಿಗಳು, ಚನ್ನವೀರ ಸ್ವಾಮಿಗಳು, ತಿಪ್ಪಯ್ಯಸ್ವಾಮಿಗಳು ,ಚನ್ನವೀರ ಮಹಾಸ್ವಾಮಿಗಳು, ಹಾಗೂ ಈಗ ಒಂಬತ್ತನೆಯವರಾಗಿ ಶ್ರೀಮ.ನಿ.ಪ ಚನ್ನವೀರ ಮಹಾಸ್ವಾಮಿಗಳು ಮಠದ ಪರಂಪರೆಯನ್ನು ಉಳಿಸಿ ಬೆಳೆಸಿ ಸಮರ್ಥವಾಗಿ ಮುಂದುವರಿಸಿದ್ದಾರೆ ಹಾಗೂ ಭಕ್ತರ ಪ್ರಿಯ ಗುರುಗಳಾಗಿ ಈ ಭಾಗದಲ್ಲಿ ಭಕ್ತರ ಪ್ರೀತಿ ಗೌರವಗಳಿಗೆ ಭಾಜನರಾಗಿದ್ದಾರೆ.ಜಂಗಮ ತತ್ವವನ್ನು ತಪ್ಪದೇ ಪಾಲಿಸಿಕೊಂಡು ಬಂದಿರುವ ಕಾರಣದಿಂದಾಗಿ ಈ ಕ್ಷೇತ್ರವು ಜಂಗಮಕ್ಷೇತ್ರವೆಂದೆ ಈಗಲೂ ಕರೆಯಿಸಿಕೊಳ್ಳುತ್ತಿದೆ.





12ನೇ ಶತಮಾನದ ಕಲ್ಯಾಣ ಕ್ರಾಂತಿ ನಂತರ ಚದುರಿ ಹೋಗಿದ್ದ ಶರಣ ಸಾಹಿತ್ಯ ಮತ್ತೆ 15ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಲ್ಲಿ ಮತ್ತೆ ಮುನ್ನೆಲೆಗೆ ಬಂದಿದ್ದು ವಿಶೇಷವಾದದ್ದು. ಹಂಪಿಯಲ್ಲಿದ್ದ ನೂರೊಂದು ಶರಣರು ವಚನಗಳ ಸಂಗ್ರಹ ವಿಶ್ಲೇಷಣೆ ಮೊದಲಾದ ಕಾರ್ಯಗಳನ್ನು ಹಂಪಿಯಲ್ಲಿ ಕುಳಿತು ಮಾಡಿರುವುದು ಚರಿತ್ರೆಯಾಗಿದೆ. ಕಲ್ಲು ಮಠದ ಪ್ರಭುದೇವರ ಲಿಂಗ ಲೀಲಾ ವಿಲಾಸ ಚರಿತ್ರೆ ವೀರಣ್ಣೊಡೆಯನ ಶಿವತತ್ವ ಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಕೃತಿಗಳು ಅತ್ಯಂತ ಮಹತ್ವದ ಗ್ರಂಥಗಳು.17ನೇ ಶತಮಾನದಲ್ಲಿ ಮತ್ತೇ ಮೈಲಾರದ ಬಸವಲಿಂಗ ಶರಣರು ಷಟ್ ಸ್ಥಲ ಸಿದ್ಧಾಂವನ್ನು ಪ್ರತಿಪಾದಿಸಿದವರು.

### ಅನುಭಾವದ ಶರಣ ಮೈಲಾರದ ಬಸವಲಿಂಗ ಶರಣರು

ವಚನಾಗಮವು ಷಟ್ ಸ್ಥಲ ಸಿದ್ದಾಂತ ಲಿಂಗ ಕೇಂದ್ರಿತವಾದದ್ದೆಂದು ಎಂದು ಕಲ್ಲಮಠದ ಪ್ರಭುದೇವ ಪ್ರತಿಪಾದಿಸಿದ್ದಾನೆ. ಇದೇ ಷಟ್ ಸ್ಥಲ ಸಿದ್ಧಾಂತವನ್ನು ಮತ್ತೆ ಪ್ರತಿಪಾದಿಸಿದವರು17ನೇ ಶತಮಾನದಲ್ಲಿ ಇದೇ ಜಿಲ್ಲೆಯ ಹಡಗಲಿ ತಾಲೂಕಿನ ಮೈಲಾರದ ಬಸವಲಿಂಗ ಶರಣರು ಲಿಂಗ ನಾಯಕನಹಳ್ಳಿಯ ಶ್ರೀ ಮಠದ ಭಕ್ತರಾಗಿ, ಅನುಭಾವದ ಶರಣಾಗಿ ಬಾಳಿದವರು.

### ಇವರ ಕೃತಿಗಳು

**ಗುರು ಕರಣ ತ್ರಿವಿಧಿ,**
**ಶಿವಾನುಭವ ದರ್ಪಣ,**
**ನಿರಾಭಾರಿ ವೀರಶೈವ ಸಿದ್ದಾಂತ,**
**ಲಿಂಗ ಪೂಜಾ ವಿಧಾನ**

ಮೊದಲಾದವುಗಳನ್ನು ರಚಿಸುವ ಮೂಲಕ ಶರಣ ಸಂಸ್ಕೃತಿಗೆ ಮಹತ್ತರ ಕೊಡುಗೆಯನ್ನು ಕೊಟ್ಟಿದ್ದಾರೆ.

ಮೈಲಾರದಲ್ಲಿ ಸಾಮಾನ್ಯ ವ್ಯಾಪಾರಿಯಾಗಿದ್ದ ಬಸಪ್ಪ ಲಿಂಗನಾಯಕನಹಳ್ಳಿಯ ಚೆನ್ನವೀರ ಶ್ರೀಗಳ ಕೃಪೆಯಿಂದ ಬಸವಲಿಂಗ ಶರಣರಾದವರು.ಇವರು ರಚಿಸಿರುವ ಅನುಭಾವದ ಸಾಹಿತ್ಯ ಪಂಡಿತರಿಗೆ ಅಷ್ಟೇ ಅಲ್ಲ ಪಾಮರರ ಮನೆಮನೆಗಳನ್ನು ಮುಟ್ಟಿತ್ತು. ಸುಮಾರು 250ವರ್ಷಗಳ ಹಿಂದೆ ರಚಿಸಲ್ಪಟ್ಟ ಸಾಹಿತ್ಯ ಮೈಲಾರ-ಲಿಂಗನಾಯಕನಹಳ್ಳಿ ಸುತ್ತಲಿನ ಧಾರವಾಡ ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿ ಪ್ರತಿಯೊಬ್ಬರ ಮನೆ ಮನೆಗಳಲ್ಲಿಇವರ ಕೃತಿಗಳು ಇರುತ್ತಿದ್ದವು.ಜನರು ಇವರ ತ್ರಿವಧಿಗಳನ್ನು ಓದುತ್ತಿದ್ದರು. ನಾವು ಚಿಕ್ಕವರಿದ್ದಾಗ ಇವರ ಈ ತ್ರಿವಧಿಗಳನ್ನು ನಮ್ಮ ತಾಯಿ ಓದಿ ನಮಗೆ ಹೇಳುತ್ತಿದ್ದರು. ಬಳ್ಳಾರಿ ಧಾರವಾಡ ಚಿತ್ರದುರ್ಗ ಜಿಲ್ಲೆಗಳಲ್ಲಿ ಇವರ ಸಾಹಿತ್ಯ ವಿಶೇಷವಾಗಿ ಗುರುಕರಣ ತ್ರಿವಧಿಯನ್ನು ಜನರು ಕಂಠಪಾಠ ಮಾಡಿಕೊಂಡಿದ್ದರು. ಮನೆ ಮಾತಾಗಿ ಇದೀಗ ಅವಿಭಜಿತ ಬಳ್ಳಾರಿ ಜಿಲ್ಲೆಯು ಬಳ್ಳಾರಿ ಹಾಗೂ ವಿಜಯನಗರವಾಗಿ ಅವಿಭಜಿತ ಧಾರವಾಡ ಜಿಲ್ಲೆ ಹಾವೇರಿ, ಗದಗ ಜಿಲ್ಲೆಗಳಾಗಿ ಪರಿವರ್ತನೆಯಾಗಿವೆ. ಈ ಪ್ರದೇಶಗಳಲ್ಲಿ ಮೈಲಾರದ ಶರಣರ ಸಾಹಿತ್ಯ ಜನಪ್ರಿಯವಾಗಿತ್ತು. ನಾಡಿನ ಹಿರಿಯ ವಿದ್ವಾಂಸರಾಗಿದ್ದ ಶಿ.ಶಿ.ಬಸವನಾಳರು ನಾಲ್ಕು ಕೃತಿಗಳನ್ನು ಒಟ್ಟಿಗೆ ಸೇರಿಸಿ ಮೈಲಾರ ಬಸವಲಿಂಗ ಶರಣರ ಕೃತಿಗಳು ಎಂಬ ಗ್ರಂಥವನ್ನು ಸಂಪಾದಿಸಿ, 1945 ರಲ್ಲಿ ಧಾರವಾಡದ ಶ್ರೀ ಮುರುಘಾಮಠದಿಂದ ಪ್ರಕಟಿಸಲಾಗಿತ್ತು ಈ ಗ್ರಂಥಕ್ಕೆ ಬಳ್ಳಾರಿಯ ರಾವ್ ಬಹದ್ದೂರ್ ವೈ ಮಹಾಬಲೇಶಪ್ಪನವರು ಆರ್ಥಿಕ ಸಹಾಯವನ್ನು ನೀಡಿ ಪ್ರಕಟಣೆಗೆ ಸಹಕರಿಸಿದ್ದರು. 1955ಹಾಗೂ 1962 ರಲ್ಲಿ ಈ ಗ್ರಂಥ ಪುನರ್ ಮುದ್ರಣಗೊಂಡಿದ್ದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇತ್ತೀಚಿಗೆ ಶ್ರೀಮಠವು ಮೈಲಾರ ಬಸವಲಿಂಗ ಶರಣರ ಸಮಗ್ರ ಕೃತಿಗಳು ಗ್ರಂಥವನ್ನು ಮತ್ತೇ ಪ್ರಕಟಿಸಿದೆ. ಇದನ್ನು ಡಾ. ಎಸ್.ಶಿವಾನಂದ ಇವರು ಸಂಪಾದಿಸಿದ್ದಾರೆ.ಇದರಿಂದ ನಮ್ಮ ತಲೆಮಾರಿನ ಜನರಿಗೆ ಇವರ ಸಾಹಿತ್ಯ ಪರಿಚಯವಾಗಲಿದೆ.

ಮೈಲಾರದ ಬಸವಲಿಂಗ ಶರಣರು,ಗುರು ಕರಣ ತ್ರಿವಧಿಯನ್ನು ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ರಚಿಸಿದ್ದಾರೆ. ಇವುಗಳಿಗೆ ಮೂಲ ಅವರ ಅನುಭಾವ, ಭಕ್ತಿ.. ಜನಪದ ಛಂದಸ್ಸನ್ನು ಲೀಲಾಜಾಲವಾಗಿ ಬಳಸಿದ ಶರಣರು ಗುರುಕರಣೆಯನ್ನು ಯಾಚಿಸುವಾಗ ಶಿಷ್ಯನ ಅಂತರಾಳದಿಂದ ಚಿಮ್ಮುವ ಭಾವನೆಗಳ ಸೊಗಸಿಗೆ ಭಕ್ತಿ ಸುನಾದವನ್ನು ಈ ತ್ರಿವಧಿಳ ಮೂಲಕ ಕಟ್ಟಿಕೊಟ್ಟಿದ್ದಾರೆ .ಇವುಗಳು ಗುರುವಿನ ಹಿರಿಮೆ ಹಾಗೂ ವೀರಶೈವ ಲಿಂಗಾಯತದ ಲಕ್ಷಣಗಳನ್ನು ತಿಳಿಸಿಕೊಡುತ್ತೇವೆ ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ.

ಹಡಗಲಿ ತಾಲೂಕಿನ ತುಂಗಭದ್ರ ತಟದ ಲಿಂಗ ನಾಯಕನಹಳ್ಳಿ ಶ್ರೀ ಮಠವು ಎರಡು ಶತಮಾನಕ್ಕೂ ಹೆಚ್ಚು ಕಾಲ ಕನ್ನಡ ನಾಡಿನ ಧಾರ್ಮಿಕ ಸಾಹಿತ್ಯಿಕ, ಸಾಮಾಜಿಕ ಸಾಂಸ್ಕೃತಿಕ ಪರಂಪರೆಯ ಕಾರ್ಯಗಳನ್ನು ನಿರ್ವಹಿಸಿಕೊಂಡು ಬಂದಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಮೈಲಾರ ಗ್ರಾಮದಲ್ಲಿ ಜನಿಸಿದ ಬಸಪ್ಪ ಮುಂದೆ ಪೂಜ್ಯ ಚೆನ್ನವೀರ ಶ್ರೀಗಳ ಆಶೀರ್ವಾದ ಗುರು ಕೃಪೆಯಿಂದ ಬಸವಲಿಂಗ ಶರಣಾಗಿ ಅನುಭಾವದ ಕವಿಯಾಗಿ ವೀರಶೈವ ಲಿಂಗಾಯತ ಧರ್ಮ ಬಾಂಧವರಿಗೆ ಧರ್ಮಕುರಿತ ಕೃತಿಗಳನ್ನು ರಚನೆ ಮಾಡಿಕೊಟ್ಟು ತಮ್ಮ 65ನೇ ವಯಸ್ಸಿನಲ್ಲಿ ಮೈಲಾರದಲ್ಲಿ ಬಯಲಾಗಿರುವುದು ತಿಳಿದು ಬರುತ್ತದೆ.

ಧರೆಯೊಲಿದ ಬಡವಂಗೆ ಧರೆಯ ಮನ್ನಣೆಯುಂಟು ಗುರುವೇ ನೀನೊಲಿದ ಶರಣಂಗೆ ಸರಿಯುಂಟೆ ಕರುಣೆ ನೀನೆನಗೆ ಕೃಪೆಯಾಗು.

ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

## ಕವಿ ಮನಸು

### ಯಾರು ಹೊಣೆ



ಎಲುಬು ತೊಗಲಿನ ನಡುವೆ ಇರುವುದೆ
ಮಾಂಸದೊಂದಿಗೆ ನೆತ್ತರು?
ಹೃದಯ ಕರಗಿಪ ಮುಗ್ಧ ಬಾಲನ
ಯಾವ ಮಾತೆಯೊ ಹೆತ್ತರು

ಬಡವನೆಂಬುದ ಸಾರಿಹೇಳಿದೆ
ಯಾರು ಹೊಣೆಯನು ಹೊರುವರು
ಕೆಲಸ ನೀಡಲು ಎಳೆಯನೀತನು
ಹೇಗೆ ಕೆಲಸವ ಕೊಡುವರು?

ನೀರು ಕಾಣದೆ ವರ್ಷವುರುಳಿತೆ
ಕೆಸರು ಅಂಟಿದೆ ಮೈಯಲಿ
ಚಿಂದಿ ಆಯುವ ಇವನ ಕಾಯಕ
ಸ್ವಚ್ಛ ಎನುವುದು ಕನಸಲಿ

ಹಸಿದ ಹೊಟ್ಟೆಯ ತುಂಬಲೋಸುಗ
ದುಡಿಯ ಬೇಕಿದೆ ಕಂದನು
ಓದು ಕಲಿಸುವರಿಲ್ಲ ಬಾಲಗೆ
ಕಳೆವ ಹೀಗೆಯೆ ಬಾಳನು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಛಲವಿದ್ದರೆ ಮನದಿ...

ಛಲವಿದ್ದರೆ ಮನದಿ
ಗಗನ ಹಿಡಿವೆ ಕ್ಷಣದಿ
ಸ್ಫೂರ್ತಿ ಬಂದರೆ ಮನಕೆ
ಸಹಾಯ ಹಸ್ತ ಜನಕೆ।

ಖುಷಿಯಾದರೆ ಮನದಿ
ಸೇವೆ ಮಾಡುವೆ ಜಗದಿ
ದೇಶ ಸೇವೆಯಲ್ಲಿ ತೊಡಗುವೆ
ದೇಶ ಕಾಯಲು ಹೋಗುವೆ।

ಸದೃಢವಾಗಿದ್ದರೆ ನಾನು
ವೈರಿಗಳ ನಾಶ ಮಾಡುವೆ
ನಾಡು ಮಾಡುವೆ ಹಾಲು ಜೇನು
ನಾಡ ಪ್ರೀತಿಯ ನಾ ಗಳಿಸುವೆ।

– ಚಂದ್ರಶೇಖರಯ್ಯ ರೋಣದಮಠ

### ಕಠಿಣ ಕರಾರು

ಪ್ರೀತಿಲೇ ಕೊಡುವೆ ಕನ್ಯೆಯನ್ನು
ಯಾವ ಊರೂ ಆದರೆ ಏನು
ಕರಾರಿನಂತೆ ಸರಿ ಇರಬೇಕು
ಬನ್ನಿರಿ ನಮ್ಮಯ ಮನೆಯ ಬಾಗಿಲಿಗೆ ||

ತಂದೆ–ತಾಯಿ ಇರಲೇಬಾರದು
ಬಂಧು–ಬಳಗ ದೂರವಿರಬೇಕು
ಒಬ್ಬನೇ ಮಗನು ಇರಬೇಕು
ದೊಡ್ಡ ನೌಕರಿ ಸಿಕ್ಕಿರಬೇಕು ||

ಸ್ವಂತ ದೊಡ್ಡ ಬಂಗ್ಲೆ ಇರಬೇಕು.
ಓಡಾಡಲು ಕಾರು ಇರಬೇಕು.
ದಾರಿ ಪಕ್ಕದಪ್ಲಾಟ್ ಇರಬೇಕು.
ಬೆಳ್ಳಿ ಬಂಗಾರ ತುಂಬಿರಬೇಕು||

ಸುಂದರ ಹುಡುಗನ ಆಗಿರಬೇಕು
ನಗು ಮುಖಕಳೆ ಹೊಳಪಿರ ಬೇಕು
ಒಳ್ಳೆಯ ಗುಣವಂತ ನಾಗಿರಬೇಕು
ಹೆಂಡತಿ ಮಾತನು ಮೀರಲೇ ಬಾರದು ||

ನಮಗೆ ಏನು ಕೊಡುವುದು ಬೇಡ
ಕನ್ಯಾದಾನ ಪ್ರೀತಿಲೇ ಮಾಡುವೆನು.
ಕಲ್ಯಾಣ ಮಂಟಪ ದೊಡ್ಡದಿ ರಬೇಕು.
ಎಲ್ಲಾ ಖರ್ಚು ನಿನ್ನದೇ ಅಳಿಯ ದೇವ್ರೇ ||

– ಎಸ್.ಎಸ್. ಮುದ್ಲಾಪುರ ಕೊಪ್ಪಳ

# ಬಾಗಿಲನು ತೆರೆದು

ಮುಂದುವರೆದ ಭಾಗ....

ಕೆಲವು ಮನೆಗಳಲ್ಲಿ ಮಹಿಳೆಯರು ಬಾಗಿಲ ಹಿಂದೆಯೇ ನಿಂತು, ಮುಖವನ್ನಷ್ಟೆ ಕಾಣಿಸುತ್ತ ಬಂದವರ ಜತೆ ಮಾತಾಡುವ ಪದ್ಧತಿಯಿದೆ. ಅಂಥಲ್ಲಿ ಅವರು ಬಾಗಿಲ ಮರೆಯಲ್ಲಿದ್ದೇ ಬೀದಿಯನ್ನು ಚೆನ್ನಾಗಿ ನೋಡುವರು. ಭಿಕ್ಷಕ್ಕೆ ಬಂದ ಜೋಗಿಯ ಚೆಲುವನ್ನು, ಕದದ ಮರೆಯಲ್ಲಿದ್ದು ಕಂಡ ನಾರಿಯರ ಗೀತೆಗಳನ್ನು ಗಮನಿಸಬೇಕು. ಶಿವನಾದರೂ ಬ್ರಹ್ಮಹತ್ಯೆಯ ದೋಷ ಕಳೆದುಕೊಳ್ಳಲು, ಭವತಿ ಭಿಕ್ಷಾಂದೇಹಿ ಎಂದು ದೇವಿಯ ಮನೆಬಾಗಿಲ ಮುಂದೆ ನಿಂದನಲ್ಲವೆ? ಪ್ರೇಮಿಗಳಿಗೆ ಬಾಗಿಲು ಕಾಯುವುದು ಸಮಸ್ಯೆಯೇ ಅಲ್ಲ. ಆದರೆ ಅಧಿಕಾರಸ್ಥರ ಮರ್ಜಿಗಾಗಿ ಬಾಗಿಲ ಕಾಯುವುದು ಕಷ್ಟ. ಅಂಚೆಕಛೇರಿ ಇಲ್ಲವೇ ಬ್ಯಾಂಕಿನ ಬಾಗಿಲ ಬಳಿ ಪೆನಶನ್ನಿಗೆಂದು ಬರುವ ಮುದುಕರನ್ನು ಗಮನಿಸಿ. ಆದರೆ ಬಾಗಿಲನು ತೆರೆದು ಸೇವೆಯನು ಕೊಡು ಎನ್ನುವ, 'ತೇರೆ ದರ್ ಪೇ ಆಯಾ ಹ್ಞೂ' ಎಂದು ಬೇಡುವ ಭಕ್ತರ ಆರ್ತತೆ ಬೇರೆ ತರಹ. ನೀ ಕೊಡದಿದ್ದರೆ ನಿನ್ನ ಘನತೆಗೇ ಚ್ಯುತಿ ಎಂಬ ಬೆದರಿಕೆಯೂ ಅಲ್ಲಿರುತ್ತದೆ. ಬಾಗಿಲ ಕಾಯ್ವ ಹಾಡುಗಳಲ್ಲಿ 'ದೇವರೇ ನಿನಗಿಂತ ನಾನು ಮೊದಲೇ ಎದ್ದಿದ್ದೇನೆ' ಎಂಬ ನಿಂದಾಸ್ತುತಿ ಕೂಡ ಇರುತ್ತದೆ; ಜಾಗೃತಗೊಂಡ ಸಾಧಕರ ಚೈತನ್ಯವೇ ದೇವರು. ಅವರಿಗೆ ಒಳಗಿನ ದೇವರ ಗೊಡವೆಯೇಕೆ ಎಂಬ ದನಿಯೂ ಅಲ್ಲಿ ಕೇಳಿಸುತ್ತದೆ.

ಮುಂಬಾಗಿಲ ಮೇಲೆ ಕೆತ್ತಲಾಗುವ ಇಷ್ಟದೇವತೆಗಳು ಸಂತರು ನಾಯಕರುಗಳನ್ನು ನಾನು ಪರಿಶೀಲಿಸಿರುವೆ. ಅತಿಹೆಚ್ಚು ಬಾಗಿಲ ಭಿತ್ತಿಯನ್ನು ಆಕ್ರಮಿಸಿರುವುದು ಗಣಪ್ಪ. ತಾಯಿ ಜಳಕ ಮಾಡುವಾಗ ಬಾಗಿಲು ಕಾವಲಿಗೆ ನಿಂತು, ಅಪ್ಪನೊಡನೆ ಕಾದವನು ಅವನು. ನಂತರದ ಸ್ಥಾನ ದೇವಿಯರಿಗೆ. ಈಚೆಗೆ ಬುದ್ಧ ಬಸವ ಅಂಬೇಡ್ಕರ್ ಸಾಯಿಬಾಬಾ ಮೊದಲಾದ ಸಂತರು–ನಾಯಕರು. ಇವರು ಮನೆಯೊಳಗಿನ ದಂಪತಿಗಳ ಸಾಮರಸ್ಯ ಸಂಘರ್ಷನ್ನು ಸೂಚಿಸಬಲ್ಲರು. ನನಗೆ ಪರಿಚಿತರಾದ ಒಬ್ಬರು ಧಮ್ಮದೀಕ್ಷೆ ಪಡೆದು ಉಪಾಸಕರಾಗಿ ಮುಂಬಾಗಿಲಿಗೆ ಬುದ್ಧನನ್ನು ಕೆತ್ತಿಸಿದ್ದರು. ಬುದ್ಧನಿಗೆ ಅವರ ಮಡದಿ ದಿನವೂ ವಿಭೂತಿ ಬಳೆಯುತ್ತಿದ್ದರು– ಪತಿವಿರುದ್ಧ ಎದ್ದ ಬಂಡಾಯವೊ ಬುದ್ಧನಿಗೆ ಕೊಟ್ಟ ಲಿಂಗದೀಕ್ಷೆಯೊ, ಸರ್ವದೈವಗಳನ್ನೂ ಸಮಾನವೆನ್ನುವ ಬಹುತ್ವವೊ ತಿಳಿಯುವುದು ಕಷ್ಟವಾಗುವಂತೆ.

ಮನೆಯೊಳಗೆ ಎಷ್ಟೇ ಬಾಗಿಲುಗಳಿರಲಿ, ಬೀದಿಬಾಗಿಲೇ ಅಧಿಕಾರಸ್ಥ ಅದು ಗಂಡಸರದೆಂದೂ ಹಿತ್ತಲಿಗೆ ತೆರೆದುಕೊಳ್ಳುವ ಹಿಂಬಾಗಿಲು ಮಹಿಳೆಯರದೆಂದೂ ವಿಂಗಡಣೆ ಆಗಿದೆ. ಬೀದಿಬಾಗಿಲಿಗೆ ತೇಗ ಬೀಟೆಯ ಕಟ್ಟಿಗೆ. ಜತೆಗೆ ಸರ್ವಾಲಂಕಾರ, ವರ್ಷಕ್ಕೊಮ್ಮೆ ಪಾಲಿಶ್, ನಿತ್ಯಪೂಜೆ. ಕಾಶಿ ಅಹಮದಾಬಾದ್ ಜೈಪುರಗಳಲ್ಲಿ ವಿಶಿಷ್ಟ ಬಾಗಿಲುಗಳನ್ನು ಗಮನಿಸಿರುವೆ. ಅವುಗಳ ಮೇಲೆ ಮುಖಾಮುಖಿ ಆಗಿರುವ ಮೀನು. ಹಾರಹಿಡಿದು ಎದುರುಬದುರಾಗಿ ಹಾರುತ್ತಿರುವ ದೇವಗನ್ನೆಯರು. ಆನೆಗಳಿಂದ ಮಾಲೆ ಹಾಕಿಸಿಕೊಳ್ಳುತ್ತಿರುವ ಗಜಲಕ್ಷ್ಮಿ. ಲಂಬಕಟ್ಟಿನಲ್ಲಿ ಗಿಳಿ ನವಿಲು ಆನೆ ಸಿಂಹ ಹುಲಿ. ವನಚರಗಳಿಗೆ ನೆಲೆಯಾದ ಕಾಡನ್ನು ಕಡಿದು ಹುಟ್ಟಿದ ಬಾಗಿಲು, ಕಾಡಿನ ಪ್ರಾಣಿಪಕ್ಷಿಗಳನ್ನು ಮೈಮೇಲೆ ಹೊತ್ತು ಮೆರೆಸುವುದು ವಿಚಿತ್ರ.


ಏನೇ ಇರಲಿ, ಚೌಕಟ್ಟಿನ ನೀಳದೋಳುಗಳಿಂದ ದಿನವೂ ಅಪ್ಪಿಗೆ ಪಡೆವ ಮುಂಬಾಗಿಲ ಧೀಮಂತಿಕೆ ಚೆಲುವು ಕಸುವುಗಳ ಬಗ್ಗೆ ಆದರ ಹುಟ್ಟುತ್ತದೆ. ಆದರೆ ಅವು ತಮ್ಮ ಜೀವಮಾನದಲ್ಲಿ ಯಾರನ್ನೆಲ್ಲ ಒಳಬಿಟ್ಟುಕೊಳ್ಳದೆ ಹೊರಗೆ ನಿಲ್ಲಿಸಿವೆ ಎಂದು ಆಲೋಚಿಸಿದರೆ ನಿರಾಶೆಯಾಗುತ್ತದೆ. ಕೆಲವರಿಗಷ್ಟೆ ಪ್ರವೇಶ ಕೊಡುವ ಬಾಗಿಲು ಎಷ್ಟು ಚಂದವಿದ್ದರೇನು ಫಲ? ದೊಡ್ಡಗೌಡರ ಬಾಗಿಲಲ್ಲಿ ತನ್ನ ಜನರ ಮೂಳೆಯ ತೋರಣವನ್ನು ಕನ್ನಡ ಕವಿ ಕಾಣಿಸಿದ್ದಾರೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ಈ ಪ್ರಕಾರವಾಗಿ ಪ್ರತಿಷ್ಠೆಯನ್ನೂ ಅಲಂಕಾರವನ್ನೂ ಬಾಚಿಕೊಂಡ ಮುಂಬಾಗಿಲ ಭಾಗ್ಯ, ಪಾಪದ ಹಿಂಬಾಗಿಲಿಗೆ ಇರುವುದಿಲ್ಲ. ಅದಕ್ಕೆ ಜಾಲಿ ಬೇವು ಜಂಗಲವುಡ್. ಆದರೇನಂತೆ, ಬಾಳಿನ ಕ್ರಾಂತಿಕಾರಕ ನಿರ್ಧಾರಗಳಿಗೆ ಕಾರಣವಾಗುವುದು ಅದುವೇ. 'ಮದುಮಗಳು' ಕಾದಂಬರಿಯಲ್ಲಿ ಬೇಡದ ಮದುವೆ ತಪ್ಪಿಸಿಕೊಂಡು ಪ್ರಿಯತಮನ ಕೂಡಲು ಚಿನ್ನಮ್ಮ ಬಳಸುವುದು ಇದೇ ಬಾಗಿಲನ್ನು. ಹಳ್ಳಿಯಲ್ಲಿದ್ದ ನಾವು ಪೇಟೆಯ ಬಾಡಿಗೆ ಮನೆಗೆ ಬಂದಾಗ, ಅದಕ್ಕೆ ಹಿತ್ತಲ ಬಾಗಿಲೇ ಇಲ್ಲದಿರುವುದು ದಿಗಿಲಾಗಿತ್ತು. ಹಿತ್ತಲಬಾಗಿಲನ್ನು ಇಡಲು ನಿರಾಕರಿಸುವುದು ಸದಸ್ಯರ ವಾಕ್ ಸ್ವಾತಂತ್ರ್ಯ ಕಿತ್ತುಕೊಳ್ಳುವುದು ಎಂದರ್ಥ. ಮುಂಬಾಗಿಲಿಂದ ದಾಳಿಯಾದರೆ ತಪ್ಪಿಸಿಕೊಳ್ಳುವ ಅವಕಾಶವನ್ನು ಗುಪ್ತದ್ವಾರದ ಮೂಲಕ ರಾಜರು ಇರಿಸಿಕೊಂಡಿದ್ದರು. ಹೀಗೆಂದೇ ಸಾಮ್ರಾಜ್ಯಗಳು ನಿಡುಗಾಲ ಉಳಿದು ಬಾಳಿದವು. ಹಿಂಬಾಗಿಲು ವಂಶವೃಕ್ಷದ ಅವ್ಯಕ್ತ ಚರಿತ್ರೆಕಾರ. ಅದಕ್ಕೆ ಬಾಯಿ ಬಂದದ್ದಾದರೆ, ನೂರಾರು ಪ್ರೇಮದ ಪಿಸುಸಂಭಾಷಣೆ, ಚುಂಬನ ಶಬ್ದ, ದುಃಖಿತರ ನಿಟ್ಟುಸಿರು ಕೇಳಬಹುದು. ಹಿಂದಿನದನ್ನು ನೆನೆಸಿಕೊಂಡು





ಹಿತ್ತಲಬಾಗಿಲಲ್ಲಿ ಅತ್ತರಂತೆ ಎಂಬ ಗಾದೆ, ದುಃಖಿತರ ಅಳಲನ್ನು ಕೇಳುವ ಕರುಣೆಯ ಕಿವಿ ಅದಕ್ಕಿದೆ ಎಂದು ಹೇಳುತ್ತಿದೆ. ಹಿತ್ತಲ ಬಾಗಿಲು ಬುದ್ಧಮಾರ್ಗಿ.

ಬಾಗಿಲು ಮುಚ್ಚುವುದು ಸಂಬಂಧ ಮುರಿದುಕೊಳ್ಳುವುದರ ಸಂಕೇತ. ದುರ್ಬಲರು ತಮ್ಮ ಅಭಿಮಾನಕ್ಕೆ ಪೆಟ್ಟು ಬಿದ್ದವರು 'ನಿನ್ನ ಮನೆ ಹೊಸಲು ತುಳಿಯಲ್ಲ' 'ನಿನ್ನ ಮನೆ ಬಾಗಿಲಿಗೆ ಬಂದಿಲ್ಲ' ಎನ್ನುವುದುಂಟು; ಅಪ್ಪನೊಟ್ಟಿಗೆ ಗುದ್ದಾಡಿಕೊಂಡ ಬಂಡುಕೋರ ಮಗ 'ಮನೆಯ ಹೊಸಲನ್ನು ಮತ್ತೆ ತುಳಿಯಲಾರೆ' ಎಂದು ಗೃಹತ್ಯಾಗ ಮಾಡಬಹುದು. ಆದರೆ ಶಪಥ ಭಗ್ನವಾಗುವ ದಿನ ಬೇಗನೆ ಬರುತ್ತದೆ. ಅಪ್ಪನಾದರೂ 'ಅವನ ಪಾಲಿಗೆ ನನ್ನ ಮನೆಯ ಬಾಗಿಲು ಮುಚ್ಚಿತು' ಎಂದು ಹತಾಶೆಯಿಂದ ಆಡಬಹುದು. ಆದರೆ ಮಗ ಮರಳಿ ಬರಲೆಂದು ಎದೆಕದ ತೆರೆದುಕೊಂಡೇ ಇರುತ್ತದೆ. ಅಹಮಿಕೆ ಕರಗಿದಾಗ ಅಂತರಂಗದ ಬಾಗಿಲುಗಳು ತಂತಾನೆ ತೆರೆಯುತ್ತವೆ. ಕೇದಾರ ಬದರಿಗಳಲ್ಲಿ ಹಿಮಗಾಲಕ್ಕೆ ಮುಚ್ಚಿಕೊಳ್ಳುವ ಬಾಗಿಲುಗಳು, ಬಿಸಿಲಿಗೆ ಹಿಮ ಕರಗಿದಾಗ ಬೇಸಗೆಯಲ್ಲಿ ತೆರೆಯುತ್ತದೆ. ಋತುಕಾಲಕ್ಕೂ ಬಾಗಿಲ ಕಾರ್ಯಾಚರಣೆಗೂ ಅವಿನಾ ಸಂಬಂಧ.

ವ್ಯಕ್ತಿಯೊ ಸಮಾಜವೊ ದೇಶವೊ ಬಾಗಿಲು ಕಿಟಕಿಗಳನ್ನು ಬೇರೆಬೇರೆ ಪ್ರಭಾವದ ಗಾಳಿಬೆಳಕಿಗೂ ತೆರೆಯಬೇಕಾಗುವುದು. ಭಾರತ ಉದ್ದಕ್ಕೂ ಪ್ರಭಾವಗಳಿಗೆ ತನ್ನ ಬಾಗಿಲನ್ನು ಮುಚ್ಚಿಕೊಳ್ಳಲಿಲ್ಲ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಪುಸ್ತಕವೊಂದೇ ಸಾಕು– ಎಷ್ಟೊಂದು ಹಣ್ಣು ತರಕಾರಿ ವಿಲಾಯತಿನಿಂದ ಬರಮಾಡಿಕೊಂಡಿದ್ದೇವೆ ಎಂದರಿಯಲು. ಆದರೆ ಬಾಗಿಲು ತೆರೆದಾಗ ಒಳಿತೇ ನುಗ್ಗುತ್ತದೆಯೆಂದು ಗ್ಯಾರಂಟಿಯಿಲ್ಲ. ಬಾಗಿಲು ಅಮಲಿನಲ್ಲಿರುವ ದ್ವಾರಪಾಲಕನಂತೆ ಬಂದವರಿಗೆಲ್ಲ ಸ್ವಾಗತ ಕೋರಬಹುದು. ಎಷ್ಟು ಯಾವಾಗ ಯಾಕಾಗಿ ತೆಗೆಯಬೇಕು ಅಥವಾ ಮುಚ್ಚಬೇಕು ಎಂಬ ಖಬರು ಬಾಗಿಲಾಳಿಗೆ ಇರಬೇಕು. ಇಂಗ್ಲೆಂಡಿನ ವ್ಯಾಪಾರಿಗಳಿಗೆ ಬಾಗಿಲು ತೆರೆದ ಮೊಘಲ್ ದೊರೆಗಳಿಗೆ ಅವರು ಇಡೀ ದೇಶವನ್ನೇ ಹಿಡಿಯುವವರೆಂಬ ಖಬರಿತ್ತೇ? ಇಂಗ್ಲೆಂಡಿನ ಪದವೀಧರ ಗಾಂಧಿಯವರೆಂದರು: 'ನಾವು ನಮ್ಮ ಮನೆಯ ಬಾಗಿಲು ಕಿಟಕಿ ತೆರೆದಿಡುತ್ತೇವೆ. ಒಳ್ಳೆಯ ಗಾಳಿ ಬೆಳಕು ಬರಲಿ. ಆದರೆ ಬಿರುಗಾಳಿ ಮನೆಯನ್ನು ಕೊಚ್ಚಿ ಹೋಗುವುದಾದರೆ, ಬಾಗಿಲು ಕಿಟಕಿ ಮುಚ್ಚುವೆ'.

ಉಳ್ಳವರ ಮನೆಬಾಗಿಲು ಅವರ ಮುಖದ ಗಾಂಭೀರ್ಯದಂತೆ ಸಾಮಾನ್ಯವಾಗಿ ಮುಚ್ಚಿಕೊಂಡಿರುತ್ತವೆ. ದುಡಿವ ವರ್ಗದ ಬೀದಿಗಳಲ್ಲಿ ಮನೆ ಮತ್ತು ಸಾರ್ವಜನಿಕದ ನಡುವೆ ಹೆಚ್ಚು ಫರಕಿಲ್ಲ. ಮನೆಮಂದಿಯ ಅರ್ಧ ಆಯಸ್ಸು ಜಗುಲಿ ಹೊಸಲು ಬಾಗಿಲಲ್ಲೇ ಕಳೆಯುವುದು. ಹಿರಿಯರು ಜಗುಲಿಯ ತೊಡೆಗಳ ಮೇಲೆ ಕೂತು, ತಮ್ಮ ಮಡಿಲಲ್ಲಿ ಎಳೆಗೂಸುಗಳನ್ನು ಆಡಿಸುತ್ತ, ಕೆಮ್ಮುತ್ತ ಕ್ಯಾಕರಿಸುತ್ತ, ಬೀದಿಯಲ್ಲಿ ಹೋಗಿಬರುವವರನ್ನು ಮಾತಾಡಿಸುತ್ತ ಇರುವರು. ನನ್ನಪ್ಪನಿಗೆ ಜಗುಲಿಕಟ್ಟೆಯ ಮೇಲೆ ಓಲಗ ಕೊಡುವುದು ಖುಶಿಯ ವಿಚಾರವಾಗಿತ್ತು. ಕೆಲವರಿಗೆ ಬಾಗಿಲನ್ನು ಮಲಗುವ ತನಕ ತೆರೆದೇ ಇಡಬೇಕು. ಸಂಜೆ ಲಕ್ಷ್ಮಿ ಆಗಮಿಸುವ ಹೊತ್ತು ಎಂದು ತೆರೆದಿಟ್ಟ ಬಾಗಿಲಿನ ಉಪಯೋಗವನ್ನು ಸೊಳ್ಳೆಗಳು ಚೆನ್ನಾಗಿ ಬಳಸುವವು. ಯೂರೋಪಿನ ದೇಶಗಳಲ್ಲಿ ಮನೆಬಾಗಿಲು ಸದಾ ಮುಚ್ಚಿರುತ್ತದೆ. ನಾನು–ಬಾನು ಅಮೆರಿಕೆಯಲ್ಲಿ ತುಸು ಕಾಲವಿದ್ದೆವು. ಕರ್ಫ್ಯೂ ಹೊಡೆಸಿಕೊಂಡಿರುತ್ತಿದ್ದ ಬೀದಿಗಳಿಂದ ಉಸಿರುಗಟ್ಟಿತು. ಪಾಶ್ಚಿಮಾತ್ಯ ಸಿನಿಮಾಗಳನ್ನು ಗಮನಿಸಿ. ಬಾಗಿಲು ಮುಚ್ಚುವ ಸೀನುಗಳೇ ಅರ್ಧಭಾಗ ತುಂಬಿರುತ್ತವೆ. 'ಬೇಬಿಸ್ ಡೇಔಟ್'ನ ಕೊನೆಯ ದೃಶ್ಯವಂತೂ ನನಗೆ ಆಘಾತ ಕೊಟ್ಟಿತು. ಆಕಸ್ಮಿಕವಾಗಿ ಕಳೆದುಹೋದ ಮಗುವನ್ನು ದಿನವೆಲ್ಲ ತಲ್ಲಣದಲ್ಲಿ ಹುಡುಕುವ ದಂಪತಿಗಳು, ಅದು ಸಿಕ್ಕಮೇಲೆ ಅದನ್ನೊಂದು ಕೋಣೆಯಲ್ಲಿ ಮಲಗಿಸಿ ಬಾಗಿಲು ಎಳೆದುಕೊಳ್ಳುತ್ತಾರೆ. ಸಿನಿಮಾ ಮುಗಿಯುತ್ತದೆ. ಆ ರಾತ್ರಿಯಾದರೂ ಜತೆಯಲ್ಲಿ ಮಲಗಿಸಿಕೊಳ್ಳಬೇಕಿತ್ತು ಅಲ್ಲವೇ? ಅಲ್ಲಿನ ಬಾಗಿಲು ಸದಾ ಬಾಗಿಲು ಮುಚ್ಚುವುದಕ್ಕೆ ಕಾರಣ ಚಳಿಯೊ, ಸಾರ್ವಜನಿಕದಿಂದ ದೂರವಾಗಿ ಖಾಸಗಿತನ ಕಾದುಕೊಳ್ಳುವುದೊ? ಕಾರಣವೇನೇ ಇರಲಿ, ಮಹಿಳೆಯರನ್ನು ಆಚೆ ಹೋಗದಂತೆ ಬಾಗಿಲು ಹಾಕುವ ಸಂಸ್ಕೃತಿಗಿಂತ ಖಾಸಗಿತನಕ್ಕೆ ಬಾಗಿಲು ಮುಚ್ಚಿಕೊಳ್ಳುವ ಸಂಸ್ಕೃತಿ ಲೇಸು.

ಮನೆಬಾಗಿಲನ್ನು ತೆರೆಯಲು ಮುಚ್ಚಲು ಶಿಷ್ಟಾಚಾರಗಳಿವೆ. ನಂಟರನ್ನು ಬೀಳ್ಕೊಡುವಾಗ ಅವರು ಕಣ್ಮರೆಯಾಗುವ ತನಕ ಬಾಗಿಲು ಹಾಕಬಾರದಂತೆ. ದಢಾರನೆ ಮುಚ್ಚಿದರೆ ಬೇರೆಯೇ ಸಂದೇಶ ರವಾನೆಯಾಗುವುದು. ಬೇಡದ ಅತಿಥಿಗಳು ವಾರಗಟ್ಟಲೆ ಬಿಡಾರ ಬಿಟ್ಟರೆ, ಮನೆಯವರಾದರೂ ಏನು ಮಾಡಬೇಕು? ಒಬ್ಬ ಗೃಹಿಣಿ ದಾಸರನ್ನು ಕಂಡು ಆಗಷ್ಟೆ ಬಾಗಿಲು ಹಾಕಿರಬೇಕು. ಅಲ್ಲಾಡುವ ಚಿಲಕ ಕಂಡು ದಾಸರು ಊಹಿಸಿ 'ಚಿಲಕವಲ್ಲಾಡುತಿದೆ' ಎಂದು ಹಾಡಿದರು. ಪ್ರತಿಮನೆಯ ಬಾಗಿಲಿಗೆ ಹೋಗಿ ಕಾದು ಭಿಕ್ಷೆ ಎತ್ತುವವರಿಗೆ ಇರುವ ದ್ವಾರಜ್ಞಾನ ಯಾರಿಗೂ ಇಲ್ಲ. ದೇವರ ದರ್ಶನಕ್ಕಾಗಿ ಗುಡಿಬಾಗಿಲ ಮುಂದೆ ನಿಂತ ಭಕ್ತರಿಗಿಂತ ಪ್ರೇಮಿಯ ದರ್ಶನಕ್ಕಾಗಿ ಬಾಗಿಲ ಮುಂದೆ ನಿಂತವರ ಸಂಖ್ಯೆ ಹೆಚ್ಚಿದೆ. ನಾನು ನೋಡಿದ ಒಂದು ಸಿನಿಮಾದಲ್ಲಿ, ಒಬ್ಬ ಹುಡುಗಿ ತಾನು ಪ್ರೇಮಿಸಿದ ಹುಡುಗನನ್ನು ಪೋಷಕರು ಒಪ್ಪುವುದಿಲ್ಲ. ಆಕೆ ಅಳುತ್ತ ತನ್ನ ಕೋಣೆಗೆ ಓಡಿಹೋಗಿ ದಢಾರೆಂದು ಬಾಗಿಲು ಹಾಕಿಕೊಳ್ಳುವಳು. ಏನಾದರೂ ಮಾಡಿಕೊಂಡಾಳೆಂದು ಅಪ್ಪ ಅಮ್ಮ ದಢದಢ ಬಾಗಿಲು ಬಡಿಯುವರು–ಬೇಟಿ, ದರವಾಜಾ ಖೋಲ್. ಆಕೆ ಎಷ್ಟೊ ಹೊತ್ತಿನ ಬಳಿಕ ತೆರೆಯುವಳು. ಫ್ಯಾನಿಗೆ ನೇತಾಡುವ ದೃಶ್ಯವನ್ನು ನಿರೀಕ್ಷಿಸುತ್ತಿದ್ದ ಪ್ರೇಕ್ಷಕರಿಗೆ ನಿರಾಶೆ ಆಗುವಂತೆ, ಪ್ರಿಯತಮನ ಪಟದ ಜತೆ ತಣ್ಣಗೆ ಕುಳಿತಿರುವಳು. ಬಾಗಿಲನ್ನು ಪ್ರವೇಶಿಸುವ ನಿರ್ಗಮಿಸುವ ವಿಶಿಷ್ಟ ಕ್ರಮಗಳೂ ಇವೆ. ಗುಡಿಯ ದರ್ಗಾದ ಬಾಗಿಲನ್ನು ಪ್ರವೇಶಿಸುವಾಗ ಅವುಗಳ ಹೊಸಲಿಗೆ ನಮಸ್ಕರಿಸುವ ಬರುವಾಗ ಹಿಮ್ಮುಖವಾಗಿ ದಾಟುವ ಪದ್ಧತಿಯಿದೆ. ಜೀವನದಲ್ಲಿ ಎಂದೂ ಗುಡಿಗೆ ಹೋಗದ ಕುವೆಂಪು, ಶಿಲ್ಪಕಲೆಯ ಗುಡಿಯನ್ನು ನೋಡಲು 'ಬಾಗಿಲೊಳು ಕೈಮುಗಿದು ಒಳಗೆ ಬಾ' ಎಂದು ಸೂಚಿಸಿದರು. ಬಾಗಿಲು ಪ್ರವೇಶಿಗರಿಂದ ತಾಳ್ಮೆ ನಮ್ರತೆ ಬೇಡುತ್ತದೆ. ಎದೆಕದ ತೆಗೆಯದೆ ಪ್ರೀತಿ ಹರಿಸಲಾಗದು. ಪ್ರಾಣಪುರುಷ ತಾಳ್ಮೆಯಿಂದ ಕಾಯದಿದ್ದರೆ ರತಿಕವಾಟವೂ ದ್ರವಿಸದು.

ಹಳ್ಳಿಯಲ್ಲಿದ್ದ ನಮ್ಮ ಮನೆಯ ದಪ್ಪನೆಯ ಬಾಗಿಲು, ತೆರೆವಾಗ ಮುಚ್ಚುವಾಗ ಭಯಂಕರ ಸದ್ದು ಮಾಡುತ್ತಿತ್ತು. ನನ್ನ ಕೀಲುಗಳಿಗೆ ಎಣ್ಣೆ ಕುಡಿಸಿರೊ ಎಂದು ಬೀದಿಯನ್ನೇ ಎಬ್ಬಿಸುವಂತೆ ಆರ್ತನಾದ. ಕಳ್ಳ ತೆರೆದು ಬರುವ ಸಾಧ್ಯತೆಯೇ ಇರಲಿಲ್ಲ. ಈಗಿರುವ ಮನೆಯ ಗೇಟ್ಬಾಗಿಲು ಕೂಡ ಸೈರನ್ನಿನಂತೆ ಬಂದವರ ಸೂಚನೆ ಕೊಡುತ್ತಿದೆ. ನನ್ನ ಪ್ರಕಾರ ಬಂದವರು ಬಾಗಿಲಗಂಟೆ ಬಾರಿಸಬೇಕು. ಕದವನ್ನು ದಢದಢ ಬಡಿಯುವರನ್ನು ಕಂಡರೆ ನನಗಾಗದು. ತಟ್ಟಿದರೆ ತಬಲಾದ ಮೇಲೆ ಮೃದುಬೆರಳು ಆಡಿದಾಗ ಹುಟ್ಟುವ ಮಧುರನಾದ ಕೇಳಿಸಬೇಕು. ನಾದದ ಆಧಾರದ ಮೇಲೆ ಅತಿಥಿ ಅಭ್ಯಾಗತರ ಸೂಕ್ಷ್ಮತೆ ಅಳೆಯಬಹುದು. ಹೋಟೆಲುಗಳಲ್ಲಿ ಪ್ಲೀಸ್ ಡೋಂಟ್ ಡಿಸ್ಟರ್ಬ್ ಎಂದು ನವವಿವಾಹಿತರು ತಂಗಿರುವ ಕೋಣೆಗಳ ಬಾಗಿಲಿಗೆ ಸೂಚನ ಫಲಕ ಸಿಕ್ಕಿಸುವುದುಂಟು. ಗಾಯಕಿ ಅನ್ನಪೂರ್ಣದೇವಿಯವರು ರವಿಶಂಕರರ ವಿಚ್ಛೇದನದ ಬಳಿಕ ಒಂಟಿಯಾಗಿ ಬದುಕಿದರು. ತಮ್ಮ ಬಾಗಿಲ ಮೇಲೆ 'ಕರೆಗಂಟೆ ಒತ್ತಿ. ಪ್ರತಿಕ್ರಿಯೆ ಬಾರದಿದ್ದಲ್ಲಿ ನಿಮ್ಮ ಸಂದೇಶ ಬಿಟ್ಟುಹೋಗಿ' ಎಂದು ಬರೆಸಿದ್ದರು. ಆದರೆ ಈ ಸೂಕ್ಷ್ಮವನ್ನು ವಿದ್ಯುತ್ ಅಂಚೆ ಕೊರಿಯರ್ ಇಲಾಖೆಯವರಿಗೆ ಕಲಿಸಲು ಸಾಧ್ಯವಿಲ್ಲ. ಕೆಲವರಂತೂ ಕಳ್ಳರ ಮನೆಯನ್ನು ರೈಡ್ ಮಾಡಲು ಬಂದ ಪೋಲಿಸರಂತೆ ಬಡಿಯುತ್ತಾರೆ. ಕದ ತಟ್ಟುವುದಕ್ಕೆ ಬಹಳ ಅರ್ಥಗಳಿವೆ. ನೊಂದವರು ನ್ಯಾಯಾಲಯದ ಕದ ತಟ್ಟುವಾಗ ಶಬ್ದ ಬಾರದೆ ಇರಬಹುದು. ಆದರೆ ನೋವು ಕಾಣುತ್ತದೆ. ಕೆಲವು ಕದಗಳನ್ನು ನಾವಾಗೇ ತಟ್ಟಲಾಗದು. ಬೇರೆ ಯಾರೊ ತಟ್ಟುವುದನ್ನೂ ಬಯಸಲಾಗದು. ಉದಾ. ಸಾವು ಮತ್ತು ಯುದ್ಧ. ಬಳೆಗಾರ ಚನ್ನಯ್ಯ ಬಾಗಿಲಿಗೆ ಬಂದಿಹೆನು, ಒಳಬರಲಪ್ಪಣೆಯೇ?

ನಾನು ಪ್ರವಾಸ ಹೋದಾಗ ಕೋಟೆ ಅರಮನೆಗಳ ಬಾಗಿಲುಗಳನ್ನು ಗಮನಿಸುತ್ತೇನೆ. ಭಾರತದಲ್ಲೇ ಎತ್ತರವಾದ ಬಾಗಿಲುಳ್ಳ ಫತೇಪುರ್ ಸಿಕ್ರಿಯ ಬುಲಂದ್ ದರವಾಜಾ ನೆನಪಾಗುತ್ತದೆ. ಆದರೆ ಅಕಬರನ ಶಯ್ಯಾಗೃಹಕ್ಕೆ ಕದಗಳೇ ಇರಲಿಲ್ಲ. ಗೈಡಿಗೆ ಕಾರಣ ಕೇಳಿದೆ. 'ಆಕ್ರಮಣವಾದರೆ ತಪ್ಪಿಸಿಕೊಳ್ಳಲೆಂದೇ ಪರದೆ ಬಾಗಿಲುಗಳಿದ್ದವು' ಎಂದ. ಆದರೂ ಬಾಗಿಲಿಲ್ಲದ ಕೋಣೆಯಲ್ಲಿ ದೊರೆ ರಾಣಿಯೊಂದಿಗೆ ಏಕಾಂತದಲ್ಲಿ ಇರುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಯಿತು. ಕರ್ನಾಟಕದಲ್ಲಿ ಬಾಗಿಲಿಲ್ಲದ ಮನೆಗಳ ಒಂದು ಊರಿದೆ. ಕಳ್ಳರಿಗೊಡ್ಡಿದ ಸವಾಲಿನಂತಿರುವ ಅದನ್ನು ನೋಡಲು ಹೋಗಿದ್ದೆ. ಸಂತನು ಮನೆಯ ರಕ್ಷಣೆ ಮಾಡುವನು ಎಂದು ಜನರಿಗೆ ನಂಬಿಕೆಯಿತ್ತು. ಆದರೆ ಸಂತನೂ ನಿದ್ದೆಯಲ್ಲಿ ಮೈಮರೆತಾಗ ಕಳ್ಳರು ಮಹಿಮೆ ತೋರಬಾರದು ಎಂದಿಲ್ಲವಲ್ಲ. ಅದಕ್ಕಾಗಿ ರೊಕ್ಕ ಒಡವೆಗಳನ್ನು ತಿಜೋರಿಯಲ್ಲಿ ಭದ್ರವಾಗಿಟ್ಟು ಬಾಗಿಲು ಹಾಕಿದ್ದರು.

ಬಾಯಿ ಇಲ್ ಶಬ್ದಗಳಿಂದ ಬಾಗಿಲು. ಮನೆಗೆ ಬಾಯಿಯೇ ಬಾಗಿಲು. ಮನೆಯ ರೂಪ ಹೇಗೂ ಇರಲಿ, ಅದರ ಬಾಗಿಲೊಳಗೆ ಹೊಕ್ಕಾಡುತ್ತ ನಮ್ಮ ಆಯಸ್ಸು ಕಳೆಯುತ್ತದೆ. ನಮ್ಮ ಬಾಳಿನ ವಿವಿಧ ಅವಸ್ಥೆಗಳಿಗೆ ಅದು ಸಾಕ್ಷಿಯಾಗುತ್ತದೆ. ತಾಯಹೊಟ್ಟೆಯಿಂದ ಹುಟ್ಟಿದ ನಾವು ಮಣ್ಣಬಾಗಿಲ ಮೂಲಕ ನಿರ್ಗಮಿಸುತ್ತೇವೆ. ಸ್ವರ್ಗವೊ ನರಕವೊ ಇದೆಯೆಂದು ನಂಬುವವರಿಗೆ, ಕೊನೆಯ ಬಾಗಿಲ ಬಳಿಕ ಹೊಸ ಮನೆಯ ಭರವಸೆಯಿದೆ. ಆದರೆ ಕಾಣದ ಕಡಲಿದೆ ಎಂದು ಭಾವಿಸಿದವರಿಗೆ? ಕೊನೆಗೂ ಉಳಿವ ಸತ್ಯವೆಂದರೆ, ವಾಸಿಸುವ ಮನೆಯದಲ್ಲ. ಅವುಗಳ ಬಾಗಿಲ ಮೂಲಕ ಮಾಡುವ ಆಗಮನ–ನಿರ್ಗಮನಗಳದ್ದು. ಬೇಂದ್ರೆಯವರಂತೂ ಮೂಡಣ ಮನೆಯ ಬಾಗಿಲ ತೆರೆದು ಬೆಳಕನ್ನು ಹರಿಸಿ ಜಗವೆಲ್ಲ ತೊಯ್ಯಿಸುವ ಸೂರ್ಯನನ್ನು ಬಣ್ಣಿಸಿ, ಬಾಗಿಲ ಅರ್ಥವನ್ನೇ ವಿಸ್ತರಿಸಿದರು. ಇದೇ ಬೇಂದ್ರೆ ಹಗಲಿನಲ್ಲಿ ಕಾಣಿಸಿಕೊಳ್ಳುವ ಚಂದ್ರನ ಹೆಣವನ್ನೂ ಚಿತ್ರಿಸಿದರು. ನಿಜ, ಸೂರ್ಯನಿರುವ ಕಾಲದಲ್ಲಿ ಚಂದ್ರ ಬರಬಾರದು. ಆದರೆ ಅವನು ಬೀರುವ ಬೆಳಕಾದರೂ ಸೂರ್ಯನಿಂದ ಕಡ ತೆಗೆದುಕೊಂಡಿದ್ದು. ಪರಸ್ಪರ ಗೆಳೆಯರೂ ಹಗೆಗಳೂ ಆದ ಆಗಸ ಕಾಯಗಳಿವು. ಜನ, ಬಾಗಿಲ ಚೌಕಟ್ಟಿನ ಮೇಲೆ ಮುಳುಗುವ ಮೂಡುವ, ಕತ್ತಲು ಬೆಳಕಿನ ಆಟವಾಡುವ ಸೂರ್ಯಚಂದ್ರರನ್ನು ಕೆತ್ತಿಸುವುದು ಸುಮ್ಮನೆ ಅಲ್ಲ.

# ಜೂನ್ 30ಕ್ಕೆ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ

## ಅಪರ ಜಿಲ್ಲಾಧಿಕಾರಿ ಅನುರಾಧ ಜಿ ನಿರ್ದೇಶನ ಹೇಳಿಕೆ | ಜಿಲ್ಲೆಯಲ್ಲಿ 15 ಪರೀಕ್ಷಾ ಕೇಂದ್ರಗಳು

■ ಹಂಪಿ ಟೈಮ್ಸ್ ಹೊಸಪೇಟೆ



ವಿಜಯನಗರ ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2024ಯು ಅಚ್ಚುಕಟ್ಟಾಗಿ ನಡೆಯುವಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಭವನದಲ್ಲಿನ ವಿಡಿಯೋ ಸಂವಾದ ಸಭಾಂಗಣದಲ್ಲಿ ಜೂನ್ 27ರಂದು ನಡೆದ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಪೂರ್ವಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು.

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಸಂಬಂಧ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಈ ಹಿಂದೆ ವಿಡಿಯೋ ಸಂವಾದ ನಡೆಸಿ ಆಯಾ ಜಿಲ್ಲೆಗಳಲ್ಲಿ ಈ ಪರೀಕ್ಷೆಯು ಸುಗಮವಾಗಿ ನಡೆಯಬೇಕು ಎಂದು ಸೂಚಿಸಿದಂತೆ ಎಲ್ಲಾ ರೀತಿಯ ಅಗತ್ಯ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗಳು ಮುಂದಾಗಬೇಕು ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪರಿಶ್ರಮವಹಿಸಿ ಸತತ ಅಧ್ಯಯನ ಮಾಡಿದ ಯಾವುದೇ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಅನ್ಯಾಯವಾಗಬಾರದು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಯು ಇಂತಹ ಸಾಮಾಜಿಕ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಬೇಕು. ಪರೀಕ್ಷೆಯಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆಯದಂತೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅವ್ಯವಹಾರಗಳನ್ನು ತಡೆಗಟ್ಟಲು ಸೂಕ್ತ ಕ್ರಮಕ್ಕಾಗಿ ಮತ್ತು ಪ್ರತಿ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂರು ಬರುವ ಹಿತದೃಷ್ಟಿಯಿಂದ ಈ ಪರೀಕ್ಷೆ ನಡೆಯುವ 15 ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿಗಳು ಈಗಾಗಲೇ ಆದೇಶ ಹೊರಡಿಸಿದ್ದಾರೆ. ಈ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡಲ್‌ಗಳನ್ನು ಸ್ವೀಕರಿಸಿ ಖಜಾನೆಯ ಭದ್ರತಾ ಕೊಠಡಿಯಲ್ಲಿ ಅಭಿರಕ್ಷಿಸುವ ಹಾಗೂ ಪರೀಕ್ಷಾ ದಿನದಂದು ಮಾರ್ಗಾಧಿಕಾರಿಗಳಿಗೆ ವಿತರಿಸುವ ಸಂಬಂಧ ಜಿಲ್ಲಾಧಿಕಾರಿಗಳು ತ್ರಿಸದಸ್ಯ ಸಮಿತಿ ರಚಿಸಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

>>4

# ಲಾರ್ವಾ ಉತ್ಪತ್ತಿ ತಾಣ ನಾಶ ಚಟುವಟಿಕೆ

ಮೊದಲ ಪುಟದಿಂದ

ತಾಣ ನಾಶ ಚಟುವಟಿಕೆಯನ್ನು ನಡೆಸುವುದರ ಮೂಲಕ ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಿ ಡೆಂಗಿ ಜ್ವರದಿಂದ ಪಾರಾಗಬಹುದು.

2024ನೇ ಸಾಲಿನ ರಾಷ್ಟ್ರೀಯ ಡೆಂಗಿ ದಿನ (16ನೇ ಮೇ 2024) ಹಾಗೂ ಜುಲೈ ತಿಂಗಳಿನಲ್ಲಿ ಆಚರಿಸಲ್ಪಡುವ ಡೆಂಗಿ ವಿರೋಧ ಮಾಸಾಚರಣೆಯ ಧ್ಯೇಯವಾಕ್ಯವು ಸಮುದಾಯದೊಂದಿಗೆ ಸೇರಿ ಡೆಂಗಿ ಜ್ವರವನ್ನು ನಿಯಂತ್ರಿಸೋಣ ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ, ಡೆಂಗಿ ಜ್ವರ ನಿಯಂತ್ರಣ ಕ್ರಮಗಳ ಅನುಷ್ಠಾನದಲ್ಲಿ ಸಾರ್ವಜನಿಕರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಲಾಗಿದೆ.

ಪ್ರತಿ ಗುರುವಾರ ಲಸಿಕಾ ದಿನವಾಗಿರುವಂತೆ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ನಿರ್ಮೂಲನಾ ದಿನವನ್ನಾಗಿ ಆಚರಿಸುವುದನ್ನು ಸಾರ್ವಜನಿಕರ ದಿನಚರಿಯ ದೈನಂದಿನ ಅಭ್ಯಾಸ / ಪದ್ಧತಿಯನ್ನಾಗಿ ಮಾಡುವುದರ ಮೂಲಕ ವರ್ತನೆಯಲ್ಲಿ ಶಾಶ್ವತ ಬದಲಾವಣೆಯನ್ನು ಅಭಿಯಾನದಂತೆ ಅನುಷ್ಠಾನಗೊಳಿಸಲು ಡೆಂಗಿ ಜ್ವರ ನಿಯಂತ್ರಣದಲ್ಲಿ ಸಾರ್ವಜನಿಕರು ಸ್ವಯಂ ಯೋಧರಾಗುತ್ತಾರೆ.

ಜೂನ್ 28ರಂದು ಶುಕ್ರವಾರ ಮಾನ್ಯ ಆರೋಗ್ಯ ಸಚಿವರು ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಈಡಿಸ್ ಲಾರ್ವಾ ಉತ್ಪತ್ತಿ ತಾಣ ನಾಶ ಚಟುವಟಿಕೆಗೆ ಚಾಲನೆ ನೀಡಲಿದ್ದಾರೆ. ರಾಜ್ಯದಾದ್ಯಂತ ಏಕಕಾಲದಲ್ಲಿ ಸಾರ್ವಜನಿಕರನ್ನು ತೊಡಗಿಸಿಕೊಂಡು 'ಈಡಿಸ್ ಲಾರ್ವಾ ಉತ್ಪತ್ತಿ ತಾಣ ನಾಶ ಚಟುವಟಿಕೆ'ಯನ್ನು ಅನುಷ್ಠಾನಗೊಳಿಸುವುದು ಡೆಂಗಿ ಜ್ವರ ನಿಯಂತ್ರಣದಲ್ಲಿ ಮೈಲುಗಲ್ಲಾಗಲಿದೆ. ಸಾರ್ವಜನಿಕರನ್ನು ಸಕ್ರಿಯವಾಗಿ ತೊಡಗಿಸಿಕೊಂಡು ನಡೆಸುವ ಈ ಚಟುವಟಿಕೆಯನ್ನು ಎಲ್ಲಾ ಹಂತಗಳಲ್ಲೂ ಸಮರೋಪಾದಿಯಲ್ಲಿ ನಡೆಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಕಟ್ಟುನಿಟ್ಟಾಗಿ ಸೂಚನೆ ನೀಡಿದ್ದಾರೆ ಎಂದು ಜಿಲ್ಲಾ ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ | ಸಂವತ್ಸರ: ಕ್ರೋಧಿ

**28–06–2024 – ಶುಕ್ರವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ ಭದ್ರ |
| ಯೋಗ | : ಸೌಭಾಗ್ಯ |
| ಕರಣ | : ಭಾವ |
| ಸೂರ್ಯೋದಯ | : 05:45:10 |
| ಸೂರ್ಯಾಸ್ತ | : 19:15:25 |
| ರಾಹು | : 10:49–12:30 |
| ಯಮಘಂಡ | : 15:53–17:34 |
| ಗುಳಿಕ | : 07:26–09:08 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 27–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.25 ಅಡಿ |
| ಒಳ ಹರಿವು | 582 ಕ್ಯುಸೆಕ್ |
| ಹೊರ ಹರಿವು | 751 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.110 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.79 ಅಡಿ |
| ಒಳ ಹರಿವು | 556 ಕ್ಯುಸೆಕ್ |
| ಹೊರ ಹರಿವು | 2183 ಕ್ಯುಸೆಕ್ |
| ಸಾಮರ್ಥ್ಯ | 3.911 ಟಿಎಂಸಿ |

# ಏತನೀರಾವರಿ ಯೋಜನೆಗಳ ವಿಳಂಭವಾದ್ರೇ ಕಪ್ಪು ಪಟ್ಟಿಗೆ ಸೇರಲಿದ್ದಾರೆ ಗುತ್ತಿಗೆದಾರರು

## ಶಾಸಕ ನೇಮಿರಾಜ್‌ನಾಯ್ಕ ಎಚ್ಚರಿಕೆ | ತ್ರೈಮಾಸಿಕ ಸಭೆಯಲ್ಲಿ ಅಧಿಕಾರಿಗಳಿಗೆ ತಾಕೀತು

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಈಗಾಗಲೇ ಮಳೆ ಆರಂಭವಾಗಿದ್ದು, ತುಂಗಭದ್ರ ನದಿಗೆ ನೀರು ಹರಿದು ಬರುತ್ತಿದೆ, ಆ ವ್ಯಾಪ್ತಿಯಲ್ಲಿರು ತಾಲೂಕಿನ ಹತ್ತಾರು ಏತನೀರಾವರಿ ಯೋಜನೆಗಳ ಕಾಲೂವೆಗಳ ಹಿನ್ನೀರಿಗೂ ಮುನ್ನ ಕಾಲೂವೆಗಳ ಸ್ವಚ್ಛತೆ ಕ್ರಮ ಕೈಗೊಳ್ಳಬೇಕು. ಹೊಳೆ ಬಂದಮೇಲೆ ಹಿನ್ನೀರು ಬಂದರೆ ಕೆಲಸವಾಗುವುದಿಲ್ಲ ಎಂದು ಸಣ್ಣ ನೀರಾವರಿ ಇಲಾಖೆಯ ಎಇಇ ಮಂಜುನಾಥರವರಿಗೆ ಶಾಸಕ ಕೆ.ನೇಮಿರಾಜ್ ನಾಯ್ಕ್ ತಾಕೀತು ಮಾಡಿದರು.

ಪಟ್ಟಣದ ತಾ.ಪಂ.ಸಭಾಂಗಣದಲ್ಲಿ ಶಾಸಕ ಕೆ.ನೇಮಿರಾಜ್‌ನಾಯ್ಕ್ ಅಧ್ಯಕ್ಷತೆಯಲ್ಲಿ ಜರುಗಿದ ತ್ರೈಮಾಸಿಕ ಸಭೆಯಲ್ಲಿ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸುವ ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು. ಯಾವುದೇ ಕಾರಣಕ್ಕೂ ರೈತರಿಗೆ ಸೌಲಭ್ಯ ವಂಚಿತರಾಗಬಾರದು ಎಂದ ಅವರು, ಅವಶ್ಯ ಇರುವಲ್ಲಿ ಹೊಸ ಪಂಪ್‌ಸೆಟ್‌ಗಳ ಅಳವಡಿಕೆ ಮಾಡಿ, ತಂಬ್ರಹಳ್ಳಿ ಕುದುರೆ ಕಾಲುವೆ ಕಾಮಗಾರಿ ಕೈಗೆತ್ತಿಕೊಳ್ಳಬೇಕು, ಚಿಲುವಾರ ಬಂಡಿ ಏತ ನೀರಾವರಿ ಯೋಜನೆ ಆಗಸ್ಟ್ ತಿಂಗಳೊಳಗೆ ಮುಗಿಯಬೇಕು ವಿಳಂಬವಾದರೆ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಶೀಪಾರಸ್ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ನೀರುಗಂಟಿಗಳಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡಿ, ಅವರಿಗೂ ಕುಟುಂಬ ನಿರ್ವಹಣೆ ಇರುತ್ತೆ. ಎಲ್ಲಾ ಟೆಂಡರ್‌ಗಳನ್ನು ಒಬ್ಬರಿಗೆ ನೀಡದೆ ತುಂಡು ಗುತ್ತಿಗೆ ನೀಡುವಂತೆ ಅಧಿಕಾರಿಗೆ ಸೂಚಿಸಿದರು.

ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದಿರುವ ಜೆಜೆಎಂ ಕಾಮಗಾರಿಗಳ ಕಾರ್ಯದಲ್ಲಿ ಸಿಸಿ ರಸ್ತೆಗಳನ್ನು ಹಾಳುಮಾಡಿದ್ದು, ಅವುಗಳ ಪ್ಯಾಚ್‌ವರ್ಕ್ ಮಾಡದರೆ ನಾನು ಕಾಮಗಾರಿ ಉದ್ಘಾಟಿಸುವುದಿಲ್ಲ ಅಲ್ಲದೆ, ಯಾರೇ ಬಂದರೂ ಬಿಡುವುದಿಲ್ಲ ಎಂದು ಕುಡಿಯುವ ನೀರು ಮತ್ತು ಸರಬರಾಜು ಇಲಾಖೆಯ ಅಧಿಕಾರಿಗೆ ಎಚ್ಚರಿಕೆ ನೀಡಿ ಗಮನ ಸೆಳೆದರು.

ತಾಲೂಕಿನ ಕೃಷಿ ಇಲಾಖೆಯ ಸಹಾಯಕ ಅಧಿಕಾರಿ ಸುನಿಲ್‌ನಾಯ್ಕ್ ಮಳೆ ಸೇರಿದಂತೆ ಬೀಜ, ಗೊಬ್ಬರಗಳ ವಿತರಣೆಯ ಮಾಹಿತಿ ನೀಡಿದರು. ಶಾಸಕರು ಅಧಿಕಾರಿಯನ್ನು ಪ್ರಶ್ನಿಸುತ್ತಾ ರೈತರ ಬೆಳೆ ವಿಮೆ ಸಮರ್ಪಕವಾಘಿ ವಿತರಣೆಯಾಗಿಲ್ಲ. ಬೇರೆ ಜಿಲ್ಲೆಗಳಲ್ಲಿ ಸಮರ್ಪಕ ನಿರ್ವಹಣೆಯಾಗಿದ್ದು ಕೇಳಿ ಬರುತ್ತಿದೆ, ಏಕೆ ನಮ್ಮಲ್ಲಿ ರೈತರೆಂದರೆ ಅಸಡ್ಡೆನಾ ಎಂದ ಅವರು ಕೂಡಲೆ ಗಮನ ಹರಿಸಿ ಸರಿ ಪಡಿಸಿ ಎಂದರು.

ತಾಲೂಕು ವೈದ್ಯಾಧಿಕಾರಿ ಡಾ.ಶಿವರಾಜ್ ಮಾತನಾಡಿ, ಪೋಲಿಯೋ, ದಡಾರ ಲಸಿಕೆಯನ್ನು ಹಾಕಲಾಗಿದ್ದು, ಕ್ಷಯ ಮತ್ತು ಕುಷ್ಠ ರೋಗಿಗಳನ್ನು ಪತ್ತೆಮಾಡಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ಆರೋಗ್ಯ ಇಲಾಯ ಕುರಿತು ಶಾಸಕರು ಗ್ರಾಮೀಣ ಪ್ರದೇಶದಲ್ಲಿ ರೋಗಿಗಳ ಮನೆಮನೆಗೆ ತೆರಳಿ ಚಿಕಿತ್ಸೆ ನೀಡಲು ಬೈಕ್ ಆಂಬುಲೇನ್ಸ್ ಒಂದು ಕೋಟಿ ರೂ, ಅನುದಾನ ಇದೆ, ತಾಲೂಕಿನ 176 ಆಶಾ ಕಾರ್ಯಕರ್ತೆಯರಿಗೆ ಅಂದಾಜು 1ಕೋಟಿ ವೆಚ್ಚದಲ್ಲಿ ಕಿಟ್‌ಗಳ ವಿತರಣೆಯಾಗಲಿದೆ ಎಂದರು.

ಬಿಇಓ ಮೈಲೇಶ್ ಬೇವೂರ್ ಮಾತನಾಡಿ, ಎಸ್‌ಎಸ್‌ಎಲ್‌ಸಿಯಲ್ಲಿ ಕಲ್ಯಾಣ ಕರ್ನಾಟಕದಲ್ಲಿಯೇ ತಾಲೂಕು ಪ್ರಥಮ ಸ್ಥಾನದಲ್ಲಿದೆ ಎಂದರು. ಈಗಾಗಲೇ ಎಲ್ಲಾ ಶಾಲೆಗಳಿಗೂ ಪುಸ್ತಕ ಮತ್ತು ಸಮವಸ್ತ್ರಗಳ ಪೂರೈಕೆಯಾಗಿದೆ ಕೊರತೆ ಇರುವ ಶಾಲೆಗಳಿಗೆ ಶಿಕ್ಷಕರ ವರ್ಗಾವಣೆ ಕೂಡಮಾಡಲಾಗಿದೆ ಎಂದರು. 184 ಶಾಲಾ ಕೊಠಡಿಗಳ ದುರಸ್ಥಿಯಲ್ಲಿವೆ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ಪತ್ರ ಬರೆಯಲಾಗಿದೆ ಎಂದರು.

ಈ ವೇಳೆ ತಾ.ಪಂ.ಪರಮೇಶ್ವರಪ್ಪ, ಭೀಮಪ್ಪ ಲಾಳಿ, ಹರೀಶ, ಹೊಸಪೇಟೆಯ ತಹಸೀಲ್ದಾರ್ ವಿಶ್ವಜೀತ್ ಮೇಹ್ತಾ, ನರೇಗಾ ಎಡಿ ರಮೇಶ್ ಮಹಾಲಿಂಗಪುರ, ಯೊಜನಾಧಿಕಾರಿ ಬೆಣ್ಣಿ ವಿಜಯಕುಮಾರ್, ಶಾಸಕರ ಆಪ್ತ ಸಹಾಯಕ ದೊಡ್ಡಬಸಪ್ಪ ರೆಡ್ಡಿ ಸೇರಿದಂತೆ ತಾಲೂಕು ಎಲ್ಲಾ ಇಲಾಖೆಗಳ ಅಧಿಕಾರಿಗಳು, ಗ್ರಾ.ಪಂ.ಗಳ ಪಿಡಿಓ ಮತ್ತು ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು.

# ಕೆಂಪೇಗೌಡರ ಆಡಳಿತ ಕನಸು ಸಾಕಾರಗೊಳಿಸಿ



**ಹಂಪಿ ಟೈಮ್ಸ್ ಕೊಟ್ಟೂರು**

ಕೆಂಪೇಗೌಡರ ಆದರ್ಶಗಳನ್ನು ಮೈಗೂಡಿ ಕೊಳ್ಳುವುದರ ಜೊತೆಗೆ ಅವರ ಕನಸುಗಳನ್ನು ಸಾಕಾರಗೊಳಿಸಲು ಆಡಳಿತ ವರ್ಗ ಶ್ರಮಿಸಬೇಕಿದೆ. ಜನಪರ ಕಾಳಜಿಹೊಂದಿದ್ದ ಅವರ ಆಡಳಿತ ಇಂದಿಗೂ ಮೆಚ್ಚುವಂತಹದ್ದು ಎಂದು ತಹಶಿಲ್ದಾರ ಅಮರೇಶ್ ಜಿ. ಕೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊಟ್ಟೂರು ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಗುರುವಾರ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ನಾಡಪ್ರಭು ಕೆಂಗೇಗೌಡರ 515ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೃಷಿಗೆ ಅವರು ಹೆಚ್ಚು ಒತ್ತುಕೊಟ್ಟವರು, ಜನರ ಉಪಯೋಗಕ್ಕಾಗಿ ನಿರ್ಮಿಸಿದ್ದ ಅಳಿವಿನ ಅಂಚಿನಲ್ಲಿರುವ ಕೆರೆ–ಕಟ್ಟೆಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬೇಕಿದೆ ಎಂದರು.

ಉಪನ್ಯಾಸಕರು ಅಂಜಿನಪ್ಪ.ಡಿ. ಉಪನ್ಯಾಸ ನೀಡಿದರು. ಪ್ರಬಂಧ ಹಾಗೂ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿದ್ದು, ವಿಜೇತ ಮಕ್ಕಳಿಗೆ ತಹಶಿಲ್ದಾರ ಬಹುಮಾನ ವಿತರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ಕೊಟ್ರೇಶ್ ಪಶುಸಂಗೋಪನಾ ಇಲಾಖೆ, ಈರಣ್ಣ ಕಾರ್ಯದರ್ಶಿ ಎಪಿಎಂಸಿ, ಎಸ್ ನಿಂಗಪ್ಪ ಇಸಿಓ ಶಿಕ್ಷಣ ಇಲಾಖೆ, ಕೊಟ್ರೇಶ ಆರ್.ಐ. ಪಟ್ಟಣ ಪಂಚಾಯಿತಿ, ಜಿ ರವೀಂದ್ರ ಬಿಆರ್‌ಪಿ, ಸಿಆರ್‌ಪಿಗಳು ಕೊಟ್ರೇಶ, ಅಜ್ಜಯ್ಯ, ಷಣ್ಮುಖ, ಗಿರಿಜಮ್ಮ, ಹಾಗೂ ಇತರರು ಇದ್ದರು. ಸಿ.ಮ. ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು.

# ಗ್ರಾಮಿಣ ಅಂಗನವಾಡಿಗಳಿಗೆ ಸಿಇಓ ಭೇಟಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಇತ್ತೀಚೆಗೆ ಗ್ರಾಮೀಣ ಪ್ರವಾಸ ಕೈಗೊಂಡು ಅಂಗನವಾಡಿಗಳಿಗೆ ಭೇಟಿ ನೀಡಿದರು.



ಹಡಗಲಿಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಉತ್ಪಾದನೆ ಮತ್ತು ಸರಬರಾಜು ಮಾಡುವ ಹಡಗಲಿ ಮಹಿಳಾ ಮತ್ತು ಮಕ್ಕಳ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದರು. ಕೇಂದ್ರದಲ್ಲಿನ ಆಹಾರ ಪದಾರ್ಥಗಳ ದಾಸ್ತಾನು ಕಡತಗಳ ಮತ್ತು ಆಹಾರ ಪದಾರ್ಥಗಳ ಮಾದರಿಗಳನ್ನು ಪರಿಶೀಲಿಸಿ ಗುಣಮಟ್ಟದ ಆಹಾರವನ್ನು ಅಂಗನವಾಡಿ ಕೇಂದ್ರಗಳಿಗೆ ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ವೇತಾ ಎಸ್., ಜಿಲ್ಲಾ ನಿರೂಪಣಾ ಅಧಿಕಾರಿ ಸುಭದ್ರಾದೇವಿ, ಹಡಗಲಿ ಸಿಡಿಪಿಓ ರಾಮನಗೌಡ ಮತ್ತು ಘಟಕದ ಸಿಬ್ಬಂದಿ ಇದ್ದರು.

# ಗಾಂಜಾ ಮಾರಾಟ ಇಬ್ಬರ ಬಂಧನ

**ಹಂಪಿ ಟೈಮ್ಸ್ ಬಳ್ಳಾರಿ**



ನಗರದ ರೂಪನಗುಡಿ ರಸ್ತೆಯ ವಾಲ್ಮೀಕಿ ಬೀದಿಯ ಒಂದು ಮನೆಯಲ್ಲಿ ಮಾದಕ ದ್ರವ್ಯ ಗಾಂಜಾವನ್ನು ಅಕ್ರಮವಾಗಿ ಶೇಖರಣೆ ಮಾಡಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಿ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಗಳ ಕಚೇರಿಯಲ್ಲಿ ಗುರುವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ನಗರದ ರಾಣಿತೋಟದ ಬೀರಪ್ಪ ಗುಡಿ ಹತ್ತಿರದ ನಿವಾಸಿ ವಾಹೀದ್ ಮತ್ತು ರೂಪನಗುಡಿ ರಸ್ತೆಯ ವಾಲ್ಮೀಕಿ ಬೀದಿಯಲ್ಲಿ ಮಾರೆಮ್ಮ ಗುಡಿ ಎದುರುಗಡೆಯ ನಿವಾಸಿ ಚಾಂದ್‌ಭಾಷಾ ಬಂಧಿತ ಆರೋಪಿಗಳಾಗಿದ್ದು, ಇವರಿಂದ ರೂ.19,10,000 ಬೆಲೆ ಬಾಳುವ 19 ಕೆಜಿ 100 ಗ್ರಾಂ ಗಾಂಜಾವನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಸೈಬರ್ ಪೊಲೀಸ್ ಠಾಣೆಯ ಡಿಎಸ್‌ಪಿ ಡಾ.ಸಂತೋಷ ಚೌವ್ಹಾಣ ಅವರ ಖಚಿತ ಮಾಹಿತಿಯೊಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್ ರಮಾಕಾಂತ್ ವೈ.ಹೆಚ್, ಪಿಎಸ್‌ಐ ವಲಿಭಾಷ ಹಾಗೂ ಸಿಬ್ಬಂದಿ ತಂಡ ರಚಿಸಿ ಕಾರ್ಯಾಚರಣೆ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಪ್ರಸ್ತಕ ಸಾಲಿನಲ್ಲಿ ಗಾಂಜಾ ಪ್ರಕರಣಗಳಿಗೆ ಸಂಬಂಧಿಸಿದಂತೆ 18 ಮಂದಿ ಆರೋಪಿಗಳನ್ನು ಬಂಧಿಸಲಾಗಿದ್ದು, 13 ಪ್ರಕರಣ ದಾಖಲಿಸಲಾಗಿದೆ. ಈವರೆಗೆ ಒಟ್ಟು 75 ಕೆಜಿ ಗಾಂಜಾ ವಶಪಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಶಾಲಾ–ಕಾಲೇಜುಗಳಲ್ಲಿ ಈಗಾಗಲೇ ಗಾಂಜಾ ಮತ್ತು ಎನ್‌ಡಿಪಿಎಸ್ ಆಕ್ಟ್ ಕುರಿತು ಅರಿವು ಮೂಡಿಸಲಾಗುತ್ತಿದೆ. ವಿವಿಧೆಡೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ಗಾಂಜಾ ಪ್ರಕರಣಗಳಲ್ಲಿ ಯಾರೇ ಭಾಗಿಯಾಗಿದ್ದರೂ ಕಾನೂನಿನಡಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಬಳಿಕ ಕಾರ್ಯಾಚರಣೆ ನಡೆಸಿದ ತಂಡಕ್ಕೆ ಎಸ್ಪಿ ರಂಜೀರ್ ಕುಮಾರ್ ಬಂಡಾರು ಅವರು ಶ್ಲಾಘಿಸಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್ ಹಾಗೂ ಇತರರು ಹಾಜರಿದ್ದರು.

# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ: ತ್ರಿಸದಸ್ಯ ಸಮಿತಿ ರಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೂನ್ 30 ರಂದು ಜಿಲ್ಲೆಯಲ್ಲಿ ನಡೆಯಲಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2024ರ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡಲ್‌ಗಳನ್ನು ಸ್ವೀಕರಿಸಿ ಖಜಾನೆಯ ಭದ್ರತಾ ಕೊಠಡಿಯಲ್ಲಿ ಅಭಿರಕ್ಷಿಸುವ ಮತ್ತು ಪರೀಕ್ಷಾ ದಿನದಂದು ಮಾರ್ಗಾಧಿಕಾರಿಗಳಿಗೆ ವಿತರಿಸುವ ಹಾಗೂ ಆಯಾ ಅಧಿವೇಶನದ ಪರೀಕ್ಷೆ ನಂತರ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಖಜಾನೆಯಲ್ಲಿ ಅಭಿರಕ್ಷಿಸಿಡುವ ಸಂಬಂಧ ವಿಜಯನಗರ ಜಿಲ್ಲೆಯ ಜಿಲ್ಲಾ ಖಜಾನೆಗೆ ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಪ್ರತಿನಿಧಿ, ಜಿಲ್ಲಾ ಖಜಾನಾಧಿಕಾರಿ ಮತ್ತು ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಪ್ರತಿನಿಧಿ ಇವರನ್ನೊಳಗೊಂಡಂತೆ ಜಿಲ್ಲಾಧಿಕಾರಿಗಳು ತ್ರಿಸದಸ್ಯ ಸಮಿತಿಯನ್ನು ರಚಿಸಿರುತ್ತಾರೆ.

ನಿಯೋಜನೆ ಮಾಡಿದ ಅಧಿಕಾರಿಗಳು: ಶ್ರೀ ಭೀಮಪ್ಪ, ಎಲ್ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ವಿಜಯನಗರ ಜಿಲ್ಲೆ, ಹೊಸಪೇಟೆ ಮೋ.9986834008, ಶ್ರೀ ರಾಮಪ್ರಸಾದ್, ಉಪನಿರ್ದೇಶಕರು, ಜಿಲ್ಲಾ ಖಜಾನೆ, ಖಜಾನೆ ಇಲಾಖೆ, ವಿಜಯನಗರ ಜಿಲ್ಲೆ, ಹೊಸಪೇಟೆ. ಮೋ. 9845425828, ಶ್ರೀಮತಿ ಎ. ಹನುಮಕ್ಕ ಉಪ ನಿರ್ದೇಶಕರು (ಆಡಳಿತ), ಪ್ರಭಾರ ಶಾಲಾ ಶಿಕ್ಷಣ ಇಲಾಖೆ, ವಿಜಯನಗರ ಜಿಲ್ಲೆ, ಹೊಸಪೇಟೆ ಮೋ. 9448999412 ಗೆ ಸಂಪರ್ಕಿಸಲು ತಿಳಿಸಿದೆ.

ನೇಮಕಗೊಂಡ ಸಮಿತಿ ಸದಸ್ಯರು ಮೊಹರು ಮಾಡಿರುವ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಾಕ್ಸ್‌ಗಳನ್ನು ಪರೀಕ್ಷಾ ದಿನಾಂಕಗಳಂದು ನಿಗದಿತ ಸಮಯಕ್ಕೆ ಜಿಲ್ಲಾ ಖಜಾನೆಯಿಂದ ನಿಯಮಾನುಸಾರ ಜಿಲ್ಲಾ ಮಾರ್ಗಾಧಿಕಾರಿಗಳ ಸುಪರ್ದಿಗೆ ವಹಿಸಿ ಈ ಬಗ್ಗೆ ದೃಢೀಕರಣ ಪಡೆಯುವುದು. ಪರೀಕ್ಷೆ ಪ್ರಾರಂಭವಾಗುವ ಅವಧಿಗಿಂತ ಮುಂಚಿತವಾಗಿ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡಲ್‌ಗಳನ್ನು ಪರೀಕ್ಷಾ ಕೇಂದ್ರಕ್ಕೆ ತಲುಪುವಂತೆ ಜಾಗೃತೆ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.




# ವಸತಿ ಶಾಲೆಯಲ್ಲಿ 7, 8, 9ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಒಟ್ಟು 23 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗಳಲ್ಲಿ 2024–25ನೇ ಸಾಲಿಗೆ 7, 8 ಮತ್ತು 9ನೇ ತರಗತಿಗಳಲ್ಲಿ ಖಾಲಿ ಇರುವ ಸ್ಥಾನಗಳನ್ನು ಜಿಲ್ಲಾ ಹಂತದಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

7ನೇ ತರಗತಿಯಲ್ಲಿ ಒಟ್ಟು 06 ಖಾಲಿ ಸ್ಥಾನಗಳು, 8ನೇ ತರಗತಿಯಲ್ಲಿ ಒಟ್ಟು 13 ಖಾಲಿ ಸ್ಥಾನಗಳು, 9ನೇ ತರಗತಿಯಲ್ಲಿ ಒಟ್ಟು 14 ಖಾಲಿ ಸ್ಥಾನಗಳು ಒಟ್ಟು 33 ಸ್ಥಾನಗಳು ಖಾಲಿ ಇರುತ್ತವೆ. ಪೌರ ಕಾರ್ಮಿಕರ, ಸಫಾಯಿ ಕರ್ಮಚಾರಿಗಳ, ಮ್ಯಾನುವೆಲ್ ಸ್ಕ್ಯಾವೆಂಜರ್, ಸ್ಮಶಾನ ಕಾರ್ಮಿಕರ, ದೇವದಾಸಿ ಸಮುದಾಯದ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಸಮೀಪದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಈ ವಸತಿ ಶಾಲೆಗಳಲ್ಲಿ ಜುಲೈ 4ರೊಳಗೆ ಸಲ್ಲಿಸಬೇಕು.

ಪ್ರವೇಶ ಪರೀಕ್ಷೆ ಜುಲೈ 7ಕ್ಕೆ: ಜುಲೈ–07ರಂದು ಹಗರಿಬೊಮ್ಮನಹಳ್ಳಿ ತಾಲೂಕಿನ ಉಪನಾಯಕನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಪ್ರವೇಶ ಪರೀಕ್ಷೆ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ವಿ. ತಿಳಿಸಿದ್ದಾರೆ.

# 'ಸಖಿ' ಒನ್ ಸ್ಟಾಪ್ ಸೆಂಟರ್‌ನಲ್ಲಿನ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ದೌರ್ಜನ್ಯಗೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೊಲೀಸ್ ಸೇವೆ, ಕಾನೂನು ಸೇವೆ, ಸಮಾಲೋಚನೆ ಮತ್ತು ತಾತ್ಕಾಲಿಕ ವಸತಿ ಒದಗಿಸುವ ಕುರಿತು "ಸಖಿ"ಒನ್ ಸ್ಟಾಪ್ ಸೆಂಟರ್ ಕೇಂದ್ರ ಸರ್ಕಾರದ ಯೋಜನೆಯನ್ನು ಅನುಷ್ಠಾನಗೊಳಿಸಲು ಸಿಬ್ಬಂದಿಗಳನ್ನು ಸೇವಾ ಒಪ್ಪಂದದ ಮೇಲೆ ಭರ್ತಿ ಮಾಡಲಾಗುತ್ತದೆ.

ಅದರಂತೆ ವಿಜಯನಗರ ಜಿಲ್ಲೆಯಲ್ಲಿ "ಸಖಿ"ಒನ್ ಸ್ಟಾಪ್ ಸೆಂಟರ್ ಅನುಷ್ಠಾನಗೊಳಿಸಲು ತಾತ್ಕಾಲಿಕವಾಗಿ 4 ಹುದ್ದೆಗಳನ್ನು ಗೌರವಧನ ಆಧಾರದಲ್ಲಿ ಭರ್ತಿ ಮಾಡಬೇಕಿದೆ.

ಆಪ್ತಸಮಾಲೋಚಕರು 1 ಹುದ್ದೆ: ಸಮಾಜ ಕಾರ್ಯದಲ್ಲಿ ಪದವಿ, ಪೋಷಣೆ, ಮೇಡಿಸಿನ್, ಹೋಮ್‌ಸೈನ್ಸ್, ಸೈಕಾಲಜಿ, ಮನೋವೈದ್ಯಶಾಸ್ತ್ರ ಮತ್ತು ಕಂಪ್ಯೂಟರ್ ಜ್ಞಾನ ಉಳ್ಳವರಾಗಿರಬೇಕು, ಸಮಾಲೋಚಕರಾಗಿ 3 ವರ್ಷ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು.

ಕಾನೂನು ಸಲಹೆಗಾರರು 2 ಹುದ್ದೆ: ಕಾನೂನು ವಿಷಯದಲ್ಲಿ ಪದವಿ ಪಡೆದಿರಬೇಕು. 2, 3 ವರ್ಷ ಅನುಭವವನ್ನು ಹೊಂದಿರಬೇಕು. ಭದ್ರತಾ ಸಿಬ್ಬಂದಿ 1 ಹುದ್ದೆ: ಸಹಾಯಕರಾಗಿ ಕೆಲಸ ಮಾಡಿದ ಅನುಭವ ಹೊಂದಿರಬೇಕು.

ವಿದ್ಯಾರ್ಹತೆ, ಹೆಚ್ಚುವರಿ ಅರ್ಹತೆಗಳು, ಅನುಭವ ಹಾಗೂ ಉಸ್ತುವಾರಿಯಲ್ಲಿ ಉತ್ತಮ ಕೆಲಸ ನಿರ್ವಹಿಸಬಲ್ಲ, ತರಬೇತಿಗಳನ್ನು ಹಮ್ಮಿಕೊಳ್ಳಲು ಸಮರ್ಥ, ಕೌಶಲ್ಯ ಹೊಂದಿರುವ, ಗಣಕಯಂತ್ರ ನಿರ್ವಹಣೆಯಲ್ಲಿ ಪರಿಣಿತಿ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಪೂರ್ಣ ಹಿಡಿತವುಳ್ಳ ಅಭ್ಯರ್ಥಿಗಳನ್ನು ನೇರವಾಗಿ ಸಂದರ್ಶನಕ್ಕೆ ಆಹ್ವಾನಿಸಿ ಸಂದರ್ಶನ ಮತ್ತು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು, ಅನುಭವ, ಕಂಪ್ಯೂಟರ್ ಪರೀಕ್ಷೆಗಳ ಮೂಲಕ ತಾತ್ಕಾಲಿಕವಾಗಿ 4 ಹುದ್ದೆಗಳನ್ನು ಗೌರವಧನ ಆಧಾರದಲ್ಲಿ ನೇಮಕಾತಿಗೊಳಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಕೆಗೆ ಜುಲೈ 10 ಕೊನೆಯ ದಿನವಾಗಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ನೇರವಾಗಿ ಕಚೇರಿಗೆ ಸಲ್ಲಿಸಬಹುದಾಗಿದೆ.

ಸಲ್ಲಿಸಬೇಕಾದ ದಾಖಲೆಗಳು: ನಿಗದಿತ ನಮೂನೆಯಲ್ಲಿ ಅರ್ಜಿ, ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ / ಶಾಲಾ ವರ್ಗಾವಣೆ ಪತ್ರ, ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಅಂಕಪಟ್ಟಿಗಳು, ಅನುಭವ ಪ್ರಮಾಣ ಪತ್ರಗಳು, ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ.

ವಿಶೇಷ ಸೂಚನೆಗಳು: "ಸಖಿ" ಯೋಜನೆಯಡಿ ಮಹಿಳೆಯರಿಗೆ ಮಾತ್ರ. ಸದರಿ ಮೇಲಿನ ಹುದ್ದೆಗಳು ಸೇವಾ ಒಪ್ಪಂದ/ ಗೌರವ ಸೇವೆಯ ಆಧಾರದಲ್ಲಿ ಇರುತ್ತವೆ. ಅಭ್ಯರ್ಥಿಗಳು ಹುದ್ದೆಗೆ ಅನುಗುಣವಾಗಿ ಅಂಗೀಕೃತ ಕಾಲೇಜು/ವಿಶ್ವ ವಿದ್ಯಾಲಯಗಳಿಂದ ಶಿಕ್ಷಣ ಪಡೆದಿರಬೇಕು. ಅಭ್ಯರ್ಥಿಗಳ ಆಯ್ಕೆಯು ತಾತ್ಕಾಲಿಕವಾಗಿರುತ್ತದೆ. ಸದರಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕನ್ನಡ ಮತ್ತು ಇಂಗ್ಲೀಷ್ ಜ್ಞಾನ ಅಗತ್ಯವಾಗಿರುತ್ತದೆ. ಸದರಿ ನೇಮಕಾತಿಯು 11 ತಿಂಗಳ ಅವಧಿಯಾಗಿದ್ದು, ಕೆಲಸ ನಿರ್ವಹಣೆಯ ಆಧಾರದ ಮೇರೆಗೆ ಹುದ್ದೆಯನ್ನು ಜಿಲ್ಲಾ ಸಮಿತಿ ಅನುಮೋದನೆಮೇರೆಗೆಮುಂದಿನಅವಧಿಗೆಮುಂದುವರೆಸಬಹುದಾಗಿರುತ್ತದೆ. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ಮೇಲಿನ ಹುದ್ದೆಗಳ ಕರ್ತವ್ಯದಲ್ಲಿ ದಿನದ 24 ತಾಸು ಕಾರ್ಯನಿರ್ವಹಿಸಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಪ್ತಗಿರಿ ಶಾಲೆಯ ಹತ್ತಿರ ಮೆಟ್ರೋ ಫ್ಯಾಶನ್ ಮೇಲಿನ ಮಹಡಿ ಬಸವೇಶ್ವರ ಬಡಾವಣೆ ವಿಜಯನಗರ ಮೊ.9742064639, 9980996075ಗೆ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಶ್ವೇತಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ ಅಚ್ಚುಕಟ್ಟಾಗಿ ನಡೆಯಲಿ

ಮೂರನೆ ಪುಟದಿಂದ

ವಿಜಯನಗರ ಜಿಲ್ಲೆಯ ಒಟ್ಟು 15 ಪರೀಕ್ಷಾ ಕೇಂದ್ರಗಳಲ್ಲಿ ಜೂನ್ 30ರಂದು ಪರೀಕ್ಷೆ ನಡೆಯಲಿದೆ. ಅಂದು 1ನೇ ಅವಧಿಯ ಸಮಯ ಬೆಳಗ್ಗೆ 9.30 ರಿಂದ ಮಧ್ಯಾಹ್ನ 12ರವರೆಗೆ ಇರುತ್ತದೆ. 2ನೇ ಅವಧಿಯ ಸಮಯ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4.30ರವರೆಗೆ ಇರುತ್ತದೆ. ಅಂದು ಆರು ಅಧಿಕಾರಿಗಳು ಮಾರ್ಗಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಪರೀಕ್ಷೆಗೆ ಮುಖ್ಯ ಅಧೀಕ್ಷರ ನೇಮಕ ಮಾಡಲಾಗಿದೆ. ಜೊತೆಗೆ ಜಾಗೃತ ದಳವನ್ನು ನೇಮಕ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರಾದ ಹೆಚ್.ಎಂ.ಹುಲಿಬಂಡಿ ಅವರು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ತಹಸೀಲ್ದಾರ ವಿಶ್ವಜಿತ್ ಮೆಹತಾ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಪರೀಕ್ಷೆಗೆ ನಿಯೋಜನೆಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಅಧೀಕ್ಷಕರು ಹಾಗೂ ಇನ್ನೀತರರು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA